ಬೆಲೆ ರೂ.2.50
D.O.P - 15th of every month at Udupi Sorting Office

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

# ಶ್ರೀ ಶಾರದಾ

ಮಾಸಪತ್ರಿಕೆ – 15 ಅಕ್ಟೋಬರ್ 2020

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-20 ಸಂಚಿಕೆ-10 ಪುಟಗಳು-6 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಶ್ರೀ ಶಾರದಾ ಮಂಟಪದ ಕಾಮಗಾರಿ ಮುಕ್ತಾಯದ ಹಂತದಲ್ಲಿ





ಶ್ರೀ ಶಾರದಾ ಮಂಟಪದ ಭೋಜನ ಗೃಹದ ನವೀಕರಣ ಕಾಮಗಾರಿ ಮುಕ್ತಾಯದ ಹಂತಕ್ಕೆ ತಲುಪಿದೆ. ಭೋಜನ ಗೃಹದ ವಿಸ್ತರಣೆ, ಶೌಚಾಲಯದ ನವೀಕರಣ ಅಡುಗೆ ಮನೆಯ ನವೀಕರಣ ಇತ್ಯಾದಿ ಕಾಮಗಾರಿಗಳು ಮುಕ್ತಾಯದ ಹಂತಕ್ಕೆ ಬಂದಿದ್ದು ಭೋಜನಾಲಯವು ಹೊಸ ನೆಲ, ಹೊಸ ಗೋಡೆ ಹಾಗೂ ಹೊಸ ಮಾಡಿನೊಂದಿಗೆ ಸುಂದರವಾಗಿ ಕಾಣುತ್ತಿದೆ. ಭೋಜನಾಲಯದ ಗೋಡೆಗೆ ಸುಂದರವಾದ ಪೇಂಟಿಂಗ್ ಹಾಗೂ ವರ್ಣ ಚಿತ್ರವೊಂದನ್ನು ರಚಿಸಲಾಗುತ್ತಿದ್ದು ಅದು ಭೋಜನಾಲಯಕ್ಕೆ ವಿಶೇಷ ಕಳೆಯನ್ನು ನೀಡಲಿದೆ. ಶೌಚಾಲಯದಲ್ಲಿ ಮಹಿಳೆಯರಿಗೆ ಹಾಗೂ ಪುರುಷರಿಗೆ ವಿಶಾಲವಾದ ಪ್ರತ್ಯೇಕ ಸ್ನಾನದ ಕೋಣೆಗಳು ಹಾಗೂ ಶೌಚಾಲಯಗಳನ್ನು ಆಧುನಿಕ ರೀತಿಯಲ್ಲಿ ರಚಿಸಲಾಗಿದೆ. ಒಟ್ಟಾರೆ ಸುಮಾರು ರೂ.60,00,000 ವೆಚ್ಚದಲ್ಲಿ ಕೈಗೊಂಡ ನವೀಕರಣದ ಕಾಮಗಾರಿಯ ಕೆಲಸಗಳು ಮುಕ್ತಾಯದ ಹಂತಕ್ಕೆ ಬಂದಿದ್ದು ಸಮಾಜ ಬಾಂಧವರಿಂದ ತನು-ಮನ-ಧನದ ಸಹಾಯವನ್ನು ನಿರೀಕ್ಷಿಸಲಾಗುತ್ತಿದೆ.

ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಂಜುನಾಥ್ ಹೆಬ್ಬಾರ್ ಹಾಗೂ ಕಾರ್ಯದರ್ಶಿ ಶ್ರೀ ಯು. ಅರವಿಂದ ಕುಮಾರ್, ಕೋಶಾಧಿಕಾರಿ ಶ್ರೀ ಬಿ. ಜಯರಾಮ ರಾವ್ ಹಾಗೂ ಶ್ರೀ ಪ್ರಭಾಕರ ಭಂಡಿ ಇತ್ಯಾದಿ ಪದಾಧಿಕಾರಿಗಳ ಮುತುವರ್ಜಿಯಿಂದ ಅತ್ಯಂತ ಕ್ಲಪ್ತ ಸಮಯದಲ್ಲಿ ಮುಕ್ತಾಯಗೊಂಡು ನವರಾತ್ರಿಯ ಸಂದರ್ಭದಲ್ಲಿ ಸಮಾಜಕ್ಕೆ ಮರು ಸಮರ್ಪಿತವಾಗಲಿದೆ.

### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು, ಉಡುಪಿ

**ಶ್ರೀ ಶಾರದಾ ಮಂಟಪದ ಭೋಜನ ಶಾಲೆಯ ನವೀಕರಣಕ್ಕಾಗಿ ಉದಾರ ಆರ್ಥಿಕ ನೆರವಿಗಾಗಿ**

### ನಿವೇದನೆ

ಆತ್ಮೀಯ ಬಂಧುಗಳೇ,

ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಸಂಸ್ಥೆಯು ನಮ್ಮ ಸಮಾಜದ ಆತ್ಮಸ್ಥೈರ್ಯದ ಲಾಂಛನ. ಕರಾವಳಿ ಕರ್ನಾಟಕದ ಬ್ರಾಹ್ಮಣರ ಚರಿತ್ರೆಯ ಪುಟಗಳಲ್ಲಿ ನಮಗೂ ಒಂದು ಸ್ಥಾನವಿದೆ ಎಂಬ ಭರವಸೆಯನ್ನು ಮೂಡಿಸಿದ ಆಶಾಕಿರಣ.

ಐದು ದಶಕಗಳಿಗೂ ಮೀರಿದ ಈ ಸುದೀರ್ಘ ಯಾನದಲ್ಲಿ ಮೂಡಿದ ಹೆಜ್ಜೆ ಗುರುತುಗಳು ಹಲವಾರು. ಸುಮಾರು 1966ನೇ ಇಸವಿಯಲ್ಲಿ ಮುಜುಗರದ ಕ್ಷಣವೊಂದು ಎದುರಾದಾಗ ದಿ। ಅಲೆವೂರು ಶ್ಯಾಮರಾಯರ ಔದಾರ್ಯ ಮತ್ತು ಅಧ್ವರ್ಯುತನದಲ್ಲಿ ನಮ್ಮ ಸಮಾಜದ ಅಂದಿನ ಮುಂದಾಳುಗಳೆನಿಸಿದ್ದ ಅಂಬಲಪಾಡಿ ಕೃಷ್ಣರಾಯರು, ಉದ್ಯಾವರ ಅನಂತಕೃಷ್ಣ ರಾಯರು, ಐ.ಕೆ. ಶಿವರಾಯರು, ಯೋಗೇಂದ್ರ ರಾಯರು ಮೊದಲಾದವರ ನಿರ್ಧಾರ ಮತ್ತು ಪರಿಶ್ರಮದಿಂದ ಹುಟ್ಟಿ ಬೆಳೆದ ಈ ನಮ್ಮ ಸಂಸ್ಥೆ ಮುಂದೆ ಮುಂದಿನ ಪೀಳಿಗೆಯ ಯುವಜನರನ್ನು ಸೇರಿಸಿಕೊಂಡು ಮುನ್ನಡೆದು ಬೆಳೆಯಿತು. ಮುಂದಿನ ದಿನಗಳಲ್ಲಿ ಕಲ್ಯಾಣ ಮಂಟಪ, ಶ್ರೀ ಶಾರದಾ ಮಂದಿರ, ಜ್ಞಾನಮಂದಿರಗಳ ನಿರ್ಮಾಣ ಮತ್ತು ನವೀಕರಣ, ಶ್ರೀ ಶಾರದಾ ಪತ್ರಿಕೆಯ ಆರಂಭ ಮತ್ತು ನಿರಂತರ ಪ್ರಕಟಣೆ, ವಿದ್ಯಾರ್ಥಿ ವೇತನ ಪುರಸ್ಕಾರಗಳ ಜೊತೆಗೆ ವಿವಿಧ ಧಾರ್ಮಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಸತತವಾಗಿ ಹಮ್ಮಿಕೊಂಡು ಮುನ್ನಡೆಯಿತು. ಇದಕ್ಕೆಲ್ಲಾ ಸಮಾಜ ಬಾಂಧವರ ಹೃತ್ಪೂರ್ವಕ ಸಹಕಾರ ಸದಾ ಸಿದ್ಧವಾಗಿತ್ತು.

ಉಡುಪಿ ನಗರದ ಕೇಂದ್ರ ಸ್ಥಳದಲ್ಲಿದ್ದು ಜನರ ಆಯ್ಕೆಯ ಮೊದಲ ಕಲ್ಯಾಣ ಮಂಟಪವೆನಿಸಿಕೊಂಡಿದ್ದರೂ ಭೋಜನ ಶಾಲೆಯ ನವೀಕರಣವಾಗದೇ ಅತಂತ್ರವಾಗಿದ್ದುದು ಸಮಾಜ ಬಾಂಧವರು ಮತ್ತು ಗ್ರಾಹಕ ವರ್ಗಕ್ಕೆ ಅಸಮಾಧಾನ ತಂದಿತ್ತು. ದೀರ್ಘಕಾಲದ ಈ ಸಮಸ್ಯೆಯನ್ನು ಪರಿಹರಿಸಲು, ಕೊರೊನಾ ಸಾಂಕ್ರಾಮಿಕ ತಂದ ಬಿಡುವಿನ ಸಮಯವನ್ನು ಉಪಯೋಗಿಸಿದ ಪ್ರಸಕ್ತ ಆಡಳಿತ ಮಂಡಳಿ ಭೋಜನ ಶಾಲೆಯ ನವೀಕರಣ ಕಾರ್ಯವನ್ನು ಸಮಾರೋಪಾಧಿಯಲ್ಲಿ ಕೈಗೊಂಡಿತು. ಶೇಕಡಾ 98 ಕಾರ್ಯಭಾಗ ಈಗಾಗಲೇ ಮುಗಿದಿದೆ.

ಕಟ್ಟಡದ ಮೂಲ ಆಯದ ಅಂದಗೆಡಿಸದೆ, ಲಭ್ಯವಿದ್ದ ಪೂರ್ತಿ ಜಾಗವನ್ನು ಸೂಕ್ತವಾಗಿ ಬಳಸಿ, ಶೌಚಾಲಯ, ಸ್ನಾನಗೃಹ, ಅಡುಗೆ ಶಾಲೆ, ಕೈ ತೊಳೆಯುವ ವ್ಯವಸ್ಥೆ, ನಿರ್ಗಮನ ದಾರಿಗಳನ್ನು ಹೆಚ್ಚು ವ್ಯವಸ್ಥಿತವಾಗಿ ಅಳವಡಿಸಿ ನಿರ್ಮಾಣ ಕಾರ್ಯವನ್ನು ನಡೆಸಲಾಗಿದೆ. ಭೋಜನ ಶಾಲೆಯನ್ನು ವಿಸ್ತರಿಸಿ ಸುಭದ್ರ ಸ್ಟೀಲ್ ತಗಡು ಹೊದೆಸಿ, ದೀರ್ಘ ಬಾಳಿಕೆಯ ಅಣುಕು ಮುಚ್ಚಿಗೆಯೊಂದಿಗೆ ನವೀಕರಿಸಲಾಗಿದೆ. ಬಂದು ನೋಡಿದವರ ಮನಸ್ಸನ್ನು ಪೂರ್ಣವಾಗಿ ಗೆದ್ದ ಈ ನವೀಕರಣದ ಕೆಲಸವನ್ನು ಬಂದು ನೋಡಿಯೇ ತಿಳಿಯಬೇಕು. ನವೀಕರಣ ಕಾರ್ಯದ ಒಟ್ಟು ವೆಚ್ಚ 60 ಲಕ್ಷ ರೂ.ಗಳು. ಎಂದಿನಂತೆ ನಮ್ಮ ಸಮಾಜ ಬಾಂಧವರ ನೆರವಿನ ಭರವಸೆಯನ್ನು ಮನಸ್ಸಿನಲ್ಲಿಟ್ಟು ಸಾಲ ಪಡೆದು ಸಮಯದ ಮಿತಿಯೊಳಗೆ ನಿರ್ಮಾಣ ಕಾರ್ಯವನ್ನು ನಡೆಸಲಾಗಿದೆ. ಸಮಾಜ ಬಾಂಧವರ ನೆರವಿನ ಭರವಸೆಯೂ ಬರುತ್ತಿದೆ. ಕೆಲವರು ಈಗಾಗಲೇ ತಮ್ಮ ದೇಣಿಗೆಯನ್ನು ನೀಡಿದ್ದಾರೆ.

ಶ್ರೀ ಶಾರದಾ ಪತ್ರಿಕೆಯಲ್ಲೂ ದೇಣಿಗೆಗಾಗಿ ಮನವಿಯನ್ನು ಮಾಡಿದ್ದೇವೆ. ರೂ. 30,000/– ಕ್ಕಿಂತ ಹೆಚ್ಚಿನ ದೇಣಿಗೆ ನೀಡುವ ದಾನಿಗಳ ಹೆಸರನ್ನು ಶಾಶ್ವತ ಫಲಕದಲ್ಲಿ ಬರೆದಿಡುವ ಜೊತೆಗೆ ಮುಂದಿನ ಹತ್ತು ವರ್ಷಗಳ ಕಾಲಾವಧಿಯಲ್ಲಿ ಒಂದು ದಿನ ಅವರ ಕುಟುಂಬ ಸದಸ್ಯರ ಶುಭ ಸಮಾರಂಭಕ್ಕೆ ಶಾರದಾ ಕಲ್ಯಾಣ ಮಂಟಪವನ್ನು ಲಭ್ಯತೆಯ ಆಧಾರದ ಮೇಲೆ ನೀಡಲಾಗುವುದು. ರೂ.10,000/– ಕ್ಕಿಂತ ಹೆಚ್ಚಿನ ದೇಣಿಗೆ ನೀಡುವವರ ಹೆಸರನ್ನು ಶಾಶ್ವತ ಫಲಕದಲ್ಲಿ ಬರೆದಿಡಲಾಗುವುದು. ಈ ವಾಗ್ದಾನಗಳು 15 ಮಾರ್ಚ್ 2021 ರವರೆಗೆ ಊರ್ಜಿತದಲ್ಲಿರುತ್ತದೆ.

**ಸಮಾಜ ಬಾಂಧವರ ಸಮಯೋಚಿತ ಸ್ಪಂದನೆ ಹಾಗೂ ಹೆಚ್ಚಿನ ಆರ್ಥಿಕ ನೆರವನ್ನು ನಿರೀಕ್ಷಿಸುತ್ತೇವೆ.**

ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಹಾಗೂ ಸರ್ವಸದಸ್ಯರು

ಸಂಪರ್ಕ ಅಧ್ಯಕ್ಷರು ಮೊ : 9611099894, ಕಾರ್ಯದರ್ಶಿ ಮೊ : 9071366688

ದಾನಿಗಳು ತಮ್ಮ ದೇಣಿಗೆಯನ್ನು ಸಿಂಡಿಕೇಟ್ ಬ್ಯಾಂಕ್, ರಥಬೀದಿ ಶಾಖೆಯ ಉಳಿತಾಯ ಖಾತೆ (S.B.A/c No. 01092200002928 IFSC : SYNB0000109)ಕ್ಕೆ ಜಮೆ ಮಾಡಬಹುದು.



### ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು,
ಉಡುಪಿ – 576 102.

### ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ಶಾರ್ವರೀ ನಾಮ ಸಂವತ್ಸರದ ತುಲಾ ಮಾಸ ದಿನ ೮ ಸಲುವ ನಿಜ ಆಶ್ವಯುಜ ಶುದ್ಧ ಯು, ತಾ.25-10-2020ನೇ ಆದಿತ್ಯವಾರ

ವಿಜಯದಶಮಿ ದಿನದಂದು

**ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ**

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಆ ದಿನ ನಡೆಯಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.


| ಶ್ರೀ ಯು. ಅರವಿಂದ ಕುಮಾರ್ | ಶ್ರೀ ಬಿ. ಜಯರಾಮ ರಾವ್ | ಶ್ರೀ ಕೆ.ಮಂಜುನಾಥ ಹೆಬ್ಬಾರ್ |
|---|---|---|
| ಕಾರ್ಯದರ್ಶಿ | ಕೋಶಾಧಿಕಾರಿ | ಅಧ್ಯಕ್ಷರು |

ವಿ.ಸೂ : ಈ ವರ್ಷವೂ ನವರಾತ್ರಿಯ ಪ್ರತೀ ದಿನ ಸಂಜೆ ಶ್ರೀ ಶಾರದಾ ದೇವಸ್ಥಾನದಲ್ಲಿ ದುರ್ಗಾನಮಸ್ಕಾರ ಪೂಜೆಯನ್ನು ಏರ್ಪಡಿಸಲಾಗುವುದು. ದುರ್ಗಾನಮಸ್ಕಾರ ಸೇವೆಯ ಕರ್ತೃಗಳಾಗಬಯಸುವವರಿಗೆ ರೂ.5000 ಸೇವಾದರ ನಿಗದಿಪಡಿಸಲಾಗಿದೆ. ಆಸಕ್ತ ಭಕ್ತರು ವಿವರಗಳಿಗಾಗಿ ಕಾರ್ಯದರ್ಶಿ ಶ್ರೀ ಯು. ಅರವಿಂದ ಕುಮಾರ್ 9343560647ರನ್ನು ಸಂಪರ್ಕಿಸಬೇಕಾಗಿ ಕೋರುತ್ತೇವೆ.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು, ಮಾಸ್ಕ್ ಧರಿಸಿ ಸಹಕರಿಸಬೇಕೆಂದು ಕೋರುತ್ತೇವೆ. ಯಾವುದೇ ಸಭಾ ಕಾರ್ಯಕ್ರಮ ಇರುವುದಿಲ್ಲ. ವಿದ್ಯಾರ್ಥಿವೇತನವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು.

# ನಮೋ ದೇವೀ ಮಹಿಷಮರ್ದಿನಿ

ಲೇಖನ : ವೈ ಮೋಹನ ರಾವ್
ಅಂಚೆಚೀಟಿ ಸಂಗ್ರಹ : ಕೃಷ್ಣಯ್ಯ ಎಂ.ಕೆ.





ಭಕರು ದೇವಿ ಮಹಾತ್ಮೆ ಯಕ್ಷಗಾನವನ್ನು ನೋಡುತ್ತಿರುವಾಗ ಅಪರಾತ್ರಿ ಎರಡು ಗಂಟೆಗೆ ದೇವಿ ಪ್ರತ್ಯಕ್ಷವಾಗುವುದೇ ಒಂದು ಅದ್ಭುತ ಸಂಗತಿಯಾಗಿದೆ. ಅತ್ತ ನಿದ್ರೆಯೂ ಅಲ್ಲದ ಇತ್ತ ಎಚ್ಚರವೂ ಅಲ್ಲದೆ ಮನ:ಸ್ಥಿತಿಯಲ್ಲಿ ಆ ಕ್ಷಣ ಆವೇಶ ಭರಿತಳಾದ ದೇವಿ ನಮ್ಮೆದುರಿಗೆ ನಿಂತಾಗ ದಿವ್ಯಾನುಭೂತಿ ಉಂಟಾಗುವುದು. ಮತ್ತೆ "ಬಾ ಮಗನೇ ಮಹಿಷಾ...." ಎಂದು ಮಾಲಿನಿ ಕರೆದಾಗ, ಮಹಿಷಾಸುರನ ಅಬ್ಬರದ ಪ್ರವೇಶ, ಚೆಂಡೆ ಮದ್ದಳೆಯ ನಿನಾದ, ಭಾಗವತರ ಏರಿಕೆಯ ಹಾಡಿನ ಸುಸ್ವರ ಇವೆಲ್ಲವೂ ಭಕ್ತರನ್ನು ಸಂಪೂರ್ಣವಾಗಿ ಎಚ್ಚರಿಸುತವೆ.

ಸಿಂಹವಾಹಿನಿ ದೇವಿಯು ಮಹಿಷಾಸುರ ನಿಂದ ಎಸೆಯಲ್ಪಟ್ಟ ಆ ಪರ್ವತಗಳನ್ನು ಬಾಣವರ್ಷಗಳಿಂದ ಪುಡಿಪುಡಿ ಮಾಡುತ್ತಾ ಮದದಿಂದ ಕೆಂಪಾದ ಮುಖವುಳ್ಳ ಮತ್ತು ತೊದಲು ಮಾತುಳ್ಳ ಮಹಿಷಾಸುರನನ್ನು ಕುರಿತು ಹೇಳಿದಳು : 'ಗರ್ಜ ಗರ್ಜ ಕ್ಷಣಂ ಮೂಢ ಮಧು ಯಾವತ್ಪಿಬಾಮ್ಯಹಮ್ । ಮಯಾ ತ್ವಯಿ ಹತೇ$ತ್ರೈವ ಗರ್ಜಿಷ್ಯಂತ್ಯಾಶು ದೇವತಾಃ ॥

ಅಂದರೆ, "ಎಲವೋ ಮೂಢನೇ, ನಾನು ಮಧುವನ್ನು ಕುಡಿಯುವ ವರೆಗೂ ಕ್ಷಣಕಾಲ ಗರ್ಜಿಸುತ್ತಿರು. ನನ್ನಿಂದ ನೀನು ಇಲ್ಲಿಯೇ ಕೊಲ್ಲಲ್ಪಟ್ಟ ಕೂಡಲೇ ದೇವತೆಗಳು ಘರ್ಜಿಸುವರು". ಹೀಗೆ ಹೇಳಿ ಆ ದೇವಿಯು ಮೇಲೆ ಹಾರಿ, ಆ ಮಹಿಷಾಸುರನ ಮೇಲೇರಿ ಪಾದಗಳಿಂದ ಮೆಟ್ಟಿ ತುಳಿದು, ಅವನನ್ನು ಕತ್ತಿನಲ್ಲಿ ಶೂಲದಿಂದ ಇರಿದಳು. ಅನಂತರ ಅವನು ಕೂಡಾ ಆಕೆಯ ಪಾದದಿಂದ ಹೀಗೆ ಮೆಟ್ಟಲ್ಪಟ್ಟು, ತನ್ನ ಮಹಿಷರೂಪದ ಮುಖದಿಂದ ಹೊರಕ್ಕೆ ಅರ್ಧ ಬಂದಿರುವಾಗಲೇ ದೇವಿಯ ಪರಾಕ್ರಮ ಕ್ಕೊಳಗಾದನು. ಹೀಗೆ ಅರ್ಧ ಮಾತ್ರ ಹೊರಬಂದಿದ್ದ ಆ ಮಹಿಷನು ಯುದ್ಧ ಮಾಡುತ್ತಿರುವಾಗಲೇ ದೇವಿಯು ತನ್ನ ದೊಡ್ಡ ಕತ್ತಿಯಿಂದ ಅವನ ತಲೆಯನ್ನು ಕಡಿದು ಬೀಳಿಸಿದಳು.

ಆಗ ರಾಕ್ಷಸ ಸೈನ್ಯವೆಲ್ಲವೂ ಹಾಹಾಕಾರ ಮಾಡುತ್ತಾ ನಾಶವನ್ನು ಹೊಂದಿತು. ಎಲ್ಲಾ ದೇವಗಣ ಅತ್ಯಂತ ಹರ್ಷವನ್ನು ಹೊಂದಿತು. ದಿವ್ಯವಾದ ಮಹರ್ಷಿಗಳಿಂದ ಕೂಡಿ ದೇವತೆಗಳು ಆ ದೇವಿಯನ್ನು ಸ್ತುತಿಸಿದರು. ಗಂಧರ್ವರಾಜರು ಹಾಡಿದರು. ಅಪ್ಸರ ಗಣಗಳು ನರ್ತನ ಮಾಡಿದವು. (ಮಾರ್ಕಂಡೇಯ ಪುರಾಣದಲ್ಲಿ ದೇವಿ ಮಹಾತ್ಮೆಯ 'ಮಹಿಷಾಸುರ ವಧೆ' ಎಂಬ ಮೂರನೇಯ ಅಧ್ಯಾಯದಲ್ಲಿ ಈ ಸನ್ನಿವೇಶ ಬರುತ್ತದೆ.)

ಐಗಿರಿ ನಂದಿನಿ, ನಂದಿತ ಮೇದಿನಿ, ವಿಷ್ಣುಹಿತೈಷಿಣಿ ಶೈಲಸುತೇ, ಜಯ ಜಯ ಹೇ ಮಹಿಷಾಸುರ ಮರ್ದಿನಿ......

ಜಗನ್ಮಾತೆಯನ್ನು ಮಾನವರಿಂದ ದೇವತೆಗಳ ತನಕ ಸಕಲರೂ ಪೂಜಿಸಿದ್ದಾರೆ. ಸ್ತುತಿಸಿದ್ದಾರೆ. ಅವಳ ಹೆಸರೇ ಸ್ತೋತ್ರಪ್ರಿಯಾ. ಶ್ರೀರಾಮ ಶ್ರೀದುರ್ಗೆಯನ್ನು ಕಿಷ್ಕಿಂಧೆಯಲ್ಲಿ ಒಮ್ಮೆ ಪೂಜಿಸಿದ. ಮತ್ತೆ ಲಂಕೆಯಲ್ಲಿ ಇನ್ನೊಮ್ಮೆ ಅರ್ಚಿಸಿದ. ಆ ಮೇಲೆಯೇ ರಾವಣನನ್ನು ಸುಲಭವಾಗಿ ಸಂಹರಿಸಿದ. ಶ್ರೀಕೃಷ್ಣ ಗೋಲೋಕದಲ್ಲಿ ಶ್ರೀದುರ್ಗೆಯನ್ನು ಪೂಜಿಸಿದ. ಅಜ್ಞಾತವಾಸ ಯಶಸ್ವಿಯಾಗಲು ಯುಧಿಷ್ಠಿರ ಶ್ರೀದುರ್ಗೆಯನ್ನು ಪೂಜಿಸಿದ. ಕುರುಕ್ಷೇತ್ರ ಯುದ್ಧಕ್ಕೆ ಮೊದಲು ಶ್ರೀಕೃಷ್ಣ ಅರ್ಜುನನಿಗೆ ಶ್ರೀದುರ್ಗೆಯನ್ನು ಸ್ತುತಿಸುವಂತೆ ಹೇಳಿದ. ತ್ರಿಪುರಾಸುರನನ್ನು ಸಂಹರಿಸುವ ಸಮಯದಲ್ಲಿ ಪರಮೇಶ್ವರನು ಶ್ರೀದುರ್ಗೆಯನ್ನು ಪೂಜಿಸಿದ. ದೂರ್ವಾಸ ಮುನಿಯ ಶಾಪದಿಂದ ಪಾರಾಗಲು ಇಂದ್ರ ಶ್ರೀದುರ್ಗೆಯನ್ನು ಪೂಜಿಸಿದ.

ಒಂಬತ್ತು ದಿನಗಳ ನವರಾತ್ರಿ ಹಬ್ಬದಲ್ಲಿ ಶ್ರೀದುರ್ಗೆಯನ್ನು ಪೂಜಿಸಿ, ವಿಜೃಂಭಣೆಯಿಂದ ಆಚರಿಸುತ್ತೇವೆ. ಶ್ರೀದೇವಿಯು ದುರ್ಗಾಷ್ಟಮಿಯ ದಿನ ಅಷ್ಟ ಸಿದ್ಧಿಗಳನ್ನು ಪಡೆದು ಸರ್ವ ಆಯುಧಗಳನ್ನು ಹಿಡಿದು ತನ್ನ ಅಗಾಧವಾದ ಶಕ್ತಿ ಸ್ವರೂಪದಲ್ಲಿರುತ್ತಾಳೆ. ಮಹಾನವಮಿಯ ದಿನ ಶ್ರೀದುರ್ಗೆಯನ್ನು ಮಹಿಷಾಸುರಮರ್ದಿನಿ ಎಂದು ಸಹ ಕರೆಯುತ್ತಾರೆ. ಆ ದಿನ ಸಿದ್ಧಿದಾತ್ರಿಯ ರೂಪದಲ್ಲಿ ದೇವಿ ರಾಕ್ಷಸ ಸಂಹಾರ ಮಾಡಿ ತನ್ನ ಕೊನೆಯ ಸ್ವರೂಪವನ್ನು ತೋರಿದ ದಿನ. ಹತ್ತನೇ ದಿನ ವಿಜಯ ಸಾಧನೆಗಾಗಿ ವಿಜಯ ದಶಮಿಯನ್ನು ಆಚರಿಸುತೇವೆ. ಪಶ್ಚಿಮ ಬಂಗಾಳದಲ್ಲಿ ಬಹಳ ಸಡಗರದಿಂದ ನವರಾತ್ರಿಯನ್ನು ಆಚರಿಸುತಾರೆ. ನಮಗೆ ಇದು ನಾಡಹಬ್ಬ. ಮೈಸೂರು ಮಹಾರಾಜರು ಸಂಪ್ರದಾಯ ಬದ್ಧವಾಗಿ ಆಚರಿಸಿಕೊಂಡು ಬಂದ ಹಬ್ಬ. ಇಂದಿಗೂ ನವರಾತ್ರಿ ಎಂದಾಕ್ಷಣ ನೆನಪಾಗುವುದು ಮೈಸೂರು ದಸರಾ.

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ "**ಪಾರಾಯಣ**" ಸಂಜೆ ಗಂಟೆ 4-30ರಿಂದ

**ತಾ.04-11-2020 ಸಂಕಷ್ಟಹರ ಚತುರ್ಥಿಯಂದು "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

ತಾ.21-10-2020 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

ತಾ.21-10-2020, ಮತ್ತು ತಾ.05-11-2020 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ತುಲಾ ಮಾಸದ ವಿಶೇಷ ದಿನಗಳು

| | | | |
|---|---|---|---|
| 17-10-2020 | ತುಲಾ ಸಂಕ್ರಮಣ ಶರದೃತು, ನಿಜ ಅಶ್ವಯುಜ ಮಾಸದ ಶುಕ್ಲಪಕ್ಷಾರಂಭ – ಶರನ್ನವರಾತ್ರಿ ಆರಂಭ ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ಪೂಜೆ ಹಾಗೂ ದುರ್ಗಾನಮಸ್ಕಾರ ಪೂಜೆ ಆರಂಭ | 01-11-2020 | ಶರದೃತು, ನಿಜ ಅಶ್ವಯುಜ ಮಾಸದ ಕೃಷ್ಣಪಕ್ಷಾರಂಭ |
| 20-10-2020 | ಶ್ರೀ ಲಲಿತಾ ಪಂಚಮಿ | 04-11-2020 | ಸಂಕಷ್ಟಹರ ಚತುರ್ಥಿ, ಚಂದ್ರೋದಯ ರಾತ್ರಿ 8.55 |
| 21-10-2020 | ಶ್ರೀ ಶಾರದಾ ಪೂಜಾರಂಭ | 11-11-2020 | ಸರ್ವೈಕಾದಶಿ |
| 23-10-2020 | ದುರ್ಗಾಷ್ಟಮಿ | 13-11-2020 | ಸಾಯಂಕಾಲ ಜಲಪೂರಣಂ ರಾತ್ರಿ ಚಂದ್ರೋದಯಕ್ಕೆ ತೈಲಾಭ್ಯಂಗ (14ರಂದು ಬೆಳಿಗ್ಗೆ 5.19ಕ್ಕೆ) |
| 24-10-2020 | ಮಹಾನವಮಿ– ಶ್ರೀಶಾರದಾ ವಿಸರ್ಜನಂ ಆಯುಧ ಪೂಜಾ | 14-11-2020 | ನರಕ ಚತುರ್ದಶಿ, ದೀಪಾವಳಿ, ಲಕ್ಷ್ಮೀಪೂಜೆ |
| 25-10-2020 | ವಿಜಯದಶಮಿ, ಶಮೀ ಪೂಜಾ | 15-11-2020 | ಅಮಾವಾಸ್ಯೆ, ದೀಪಾವಳಿ, ಗೋಪೂಜೆ, ಬಲಿಪೂಜೆ |
| 27-10-2020 | ಸರ್ವೈಕಾದಶೀ | 16-11-2020 | ಬಲಿಪಾಡ್ಯ, ಅಂಗಡಿಪೂಜೆ ಶರದೃತು, ಕಾರ್ತಿಕ ಮಾಸದ ಶುಕ್ಲಪಕ್ಷಾರಂಭ ವೃಶ್ಚಿಕ ಸಂಕ್ರಮಣ |
| 31-10-2020 | ಹುಣ್ಣಿಮೆ | | |

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | | |
|---|---|---|
| ವಾಹನ ಸಾಲ | : | 12.5% |
| ಹಳೆಯ ವಾಹನ | : | 14% |
| ಆಭರಣ ಸಾಲ | : | 11.5% |
| ವೈಯಕ್ತಿಕ ಸಾಲ | : | 16% |
| ಶಿಕ್ಷಣ ಸಾಲ | : | 12% |
| ಅಡಮಾನ ಸಾಲ | : | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | : 5% | ನಿತ್ಯನಿಧಿ ಠೇವಣಿ | : 5% |
| 46 ದಿನಗಳಿಂದ 364 ದಿನಗಳು | : 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | : 8.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)

**With Best Compliments From :**

Land Trades BUILDERS & DEVELOPERS

UPGRADE TO A NEW LIFESTYLE

Premium Projects in Mangalore





9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+



## ಉಡುಪಿ ಸಂಘದ ಸ್ಥಾಪಕ ಬಿ.ನಾರಾಯಣ ಬೈಲಕೆರೆ

ಉಡುಪಿ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಸ್ಥಾಪಕ ಸದಸ್ಯರಾದ ಶ್ರೀ ಬೈಲಕೆರೆ ನಾರಾಯಣ ರಾವ್ ತಾ.12.10.2020ರಂದು ನಿಧನ ಹೊಂದಿದರು. ಎಲ್ಐಸಿಯ ನಿವೃತ್ತ ಉದ್ಯೋಗಿಯಾಗಿದ್ದು, ನಮ್ಮ ಸಂಘದಲ್ಲಿ ಹಲವಾರು ವರುಷಗಳ ಕಾಲ ನಿರ್ದೇಶಕರಾಗಿ, ಜತೆ ಕಾರ್ಯದರ್ಶಿಯಾಗಿ ನಮಗೆಲ್ಲರಿಗೂ ಮಾರ್ಗದರ್ಶಕರಾಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ. ಶ್ರೀಯುತರ ಸದ್ಗತಿಗಾಗಿ ಸಂಘವು ಪ್ರಾರ್ಥಿಸುತ್ತದೆ.



**** ****

## ಕೊಡವೂರು ವೆಂಕಟ್ ರಾವ್


ಅಖಿಲಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಮಾಜಿ ಅಧ್ಯಕ್ಷ ಕೊಡವೂರು ವೆಂಕಟ್ ರಾವ್ (86 ವರ್ಷ) ಇವರು ಬೆಂಗಳೂರಿನಲ್ಲಿ ತಾ.29.09.2020ರಂದು ನಿಧನರಾದರು. ಮೃತರು ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

**** ****

## ಸದಾನಂದ ರಾವ್



ಮೂಡುಬೆಳ್ಳೆಯ ನಿವೃತ್ತ ಶಿಕ್ಷಕ ಬೆಳ್ಳೆ ಸದಾನಂದ ರಾವ್ ಇವರು 10.10.2020 ರಂದು ನಿಧನ ಹೊಂದಿದರು. ಇವರು ಆದರ್ಶ ಶಿಕ್ಷಕರಾಗಿ, ಪ್ರಗತಿಪರ ಕೃಷಿಕರಾಗಿ, ಬೆಳ್ಳೆ ಮನೆತನದ ಹಿರಿಯರಾಗಿ ಜನಾನುರಾಗಿಯಾಗಿದ್ದರು. ಇವರು ಬೆಳ್ಳೆ ಚರ್ಚ್ ಪ್ರೈಮರಿ ಶಾಲೆಯಲ್ಲಿ 40 ವರ್ಷಗಳ ಸುಧೀರ್ಘ ಸೇವೆ ಸಲ್ಲಿಸಿದ್ದಾರೆ. ಇವರು ಪದವಿ ಶಿಕ್ಷಣ ವಿದ್ಯಾರ್ಥಿಗಳಿಗೂ ತರಬೇತಿ ನೀಡುತ್ತಿದ್ದರು. ಬೆಳ್ಳೆ ಪರಿಸರದಲ್ಲಿ ಅತ್ಯಂತ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು.



**** ****

## ಶ್ರೀಮತಿ ಪ್ರಸನ್ನ

ಪಡುಬಿದ್ರೆ ಎಂ.ಕೆ. ಮೋಹನ್ ರಾವ್ ಇವರ ಪತ್ನಿ ಶ್ರೀಮತಿ ಪ್ರಸನ್ನ 25.09.2020 ರಂದು ನಿಧನ ಹೊಂದಿದರು.



**** ****

## ಶ್ರೀಮತಿ ರೋಹಿಣಿ ಬ್ರಾ

ಕಾಪು ಮೋಹನ್ ರಾವ್ ಅವರ ಪತ್ನಿ ಶ್ರೀಮತಿ ರೋಹಿಣಿ ರಾವ್ 17.09.2020 ರಂದು ನಿಧನ ಹೊಂದಿದರು. ಇವರು ಪಡುಬಿದ್ರಿ ಗಣಪತಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದರು.



**** ****

## ನಾರಾಯಣ ಹೆಬ್ಬಾರ್

ಹೆಬ್ರಿ ನಾರಾಯಣ ಹೆಬ್ಬಾರ್‌ರವರು 06.09.2020 ನಿಧನರಾದರು. ಇವರು 7 ದಶಕಕ್ಕೂ ಹೆಚ್ಚು ಕಾಲ ಹೆಬ್ರಿ ಅನಂತಪದ್ಮನಾಭ ದೇವಸ್ಥಾನದ ದೇವಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಅನೇಕ ಸನ್ಮಾನಗಳು ಅವರಿಗೆ ಆಗಿವೆ. ಇವರು ಪತ್ನಿ, ಇಬ್ಬರು ಪುತ್ರರು, ಆರು ಪುತ್ರಿಯರನ್ನು ಅಗಲಿದ್ದಾರೆ.



**** ****

## ಕೇಸರಿ ಅಮ್ಮ

ಬ್ರಹ್ಮಾವರ ಮಹಾಲಿಂಗೇಶ್ವರ ದೇವಾಲಯದ ಹತ್ತಿರ ವಾಸವಾಗಿದ್ದ ಕೇಸರಿ ಅಮ್ಮನವರು (96) ದಿನಾಂಕ 28.08.2020 ರಂದು ನಿಧನ ಹೊಂದಿದರು. ಇವರು ಮುಂಡ್ಕನ ಓಲಿಯಿಂದ ಕಡುಬಿನ ಕೊಟ್ಟೆಯನ್ನು ಮಾಡುವುದರಲ್ಲಿ ಬಹಳ ಹೆಸರು ವಾಸಿಯಾಗಿದ್ದರು. ಬ್ರಹ್ಮಾವರ ಮಹಾಲಿಂಗೇಶ್ವರ ದೇವಾಲಯದ ದೇವರ ಚಾಕರಿಯನ್ನು ಹಲವು ವರುಷಗಳ ಕಾಲ ಮಾಡಿದ್ದರು.



**** ****

## ಸದಾನಂದ ರಾವ್

ಕೃಷಿ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯಾಗಿದ್ದ ಕುಟ್ರುಪಾಡಿ ಗ್ರಾಮದ ಮುಳಿಯ ನಿವಾಸಿ ಮಡಿಯಾಳ ಸದಾನಂದ ರಾವ್ (76) ಅವರು 11.09.2020ರಂದು ನಿಧನ ಹೊಂದಿದರು.



## ಲಯನ್ ಕೆ. ಮೋಹನ ಹೆಬ್ಬಾರ್

ಹೆಬ್ರಿ ಸಿಟಿ ಲಯನ್‌ನ ಸ್ಥಾಪಕ ಸದಸ್ಯರು, ಕ್ಲಬ್‌ನ ಪೂರ್ವಾಧ್ಯಕ್ಷರು, ಮಾಜಿ ಜಿಲ್ಲಾಧ್ಯಕ್ಷರು ಹಾಗೂ ಪ್ರಸ್ತುತ ಪ್ರಾಂತ್ಯ ಸಂಯೋಜಕರು, ಓರಿಯೆಂಟಲ್ ಇನ್ಶೂರೆನ್ಸ್ ಕಂಪೆನಿಯ ಜನಪ್ರಿಯ ಅಭಿವೃದ್ಧಿ ಅಧಿಕಾರಿಯಾಗಿ ನಿವೃತ್ತಿ ಹೊಂದಿರುವ, ಧಾರ್ಮಿಕ, ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ ಜನಸ್ನೇಹಿ ಸಮಾಜ ಸೇವಕರಾದ ಲಯನ್ ಕಬ್ಬಿನಾಲೆ ಮೋಹನ್ ಹೆಬ್ಬಾರ್ (68 ವರ್ಷ) ತಾ.26.09.2020ರಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿರುತ್ತಾರೆ.



**** ****

## ಸಕ್ಕಟ್ಟು ಶ್ರೀನಿವಾಸ ರಾವ್

ಸಕ್ಕಟ್ಟು (ಮತ್ಯಾಡಿ) ಶ್ರೀನಿವಾಸ ರಾವ್ ಇವರು ತಾ.03.10.2020ರಂದು ನಿಧನರಾದರು.

**** ****

## ಶ್ರೀ ಪ್ರತಾಪ್ ರಾವ್ ಎನ್.ಎಸ್

ಮಂಗಳೂರಿನ ಶ್ರೀ ಪ್ರತಾಪ್ ರಾವ್ ಎನ್.ಎಸ್ ಇವರು 11.10.2020 ರಂದು ನಿಧನ ಹೊಂದಿದರು.

**** ****

## ಶ್ರೀಮತಿ ರಮಾದೇವಿ

ಮೈಸೂರಿನ ದಿವಂಗತ ಪಡುಬಿದ್ರೆ ಜಗನ್ನಾಥರಾವ್ ಇವರ ಪತ್ನಿ ಬಪ್ಪನಾಡು ರಮಾದೇವಿ 10.10.2020 ರಂದು ನಿಧನ ಹೊಂದಿದರು.

**** ****

## ನೀಲಂಗಳ ರಾಮಕೃಷ್ಣರಾವ್

ನೀಲಂಗಳ ರಾಮಕೃಷ್ಣರಾವ್ ಇವರು 9.10.2020 ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.

**** ****

## ಸರೋಜಿನಿಯಮ್ಮ

ದಿವಂಗತ ಕನ್ಯಾನ ಭೋಜರಾಜ್ ಇವರ ಪತ್ನಿ ಸರೋಜಿನಿಯಮ್ಮ ಇವರು 9.10.2020 ರಂದು ನಿಧನ ಹೊಂದಿದರು.

**** ****

## ಶ್ರೀಮತಿ ಪ್ರೇಮ

ದಿವಂಗತ ಪುಣಚ ರಾಧಾಕೃಷ್ಣ ರಾವ್ ರವರ ಪತ್ನಿ ಶ್ರೀಮತಿ ಪ್ರೇಮ 2.10.2020 ರಂದು ನಿಧನ ಹೊಂದಿದರು.

**** ****

## ತಂತ್ರಾಡಿ ಪ್ರಭಾಕರ್ ಶ್ಯಾನುಭಾಗ್

ತಂತ್ರಾಡಿ ಪ್ರಭಾಕರ್ ಶ್ಯಾನುಭಾಗ್ ಇವರು ಮೂಲ್ಕಿಯಲ್ಲಿ 29.09.2020 ರಂದು ನಿಧನ ಹೊಂದಿದರು.

**** ****

## ಶ್ರೀಮತಿ ಶಾಂಭವಿ

ಬೆಳ್ಳಂಗಡಿ ವೆಂಕಟರಮಣ ರಾವ್ ಇವರ ಪತ್ನಿ ಶ್ರೀಮತಿ ಶಾಂಭವಿ 21.09.2020 ರಂದು ನಿಧನ ಹೊಂದಿದರು.

**** ****

## ಶ್ರೀ ಸುಕುಮಾರ್ ರಾವ್

ಧರ್ಮಸ್ಥಳದ ಶ್ರೀ ಸುಕುಮಾರ್ ರಾವ್ 23.09.2020 ರಂದು ನಿಧನ ಹೊಂದಿದರು.

**** ****

## ಶ್ರೀಮತಿ ಸುಶೀಲಾ

ದಿವಂಗತ ಹೆಬ್ರಿ ದೇವರಾವ್ ಪದ್ಮನಾಭಯ್ಯ ಇವರ ಪತ್ನಿ ಶ್ರೀಮತಿ ಸುಶೀಲಾ 22.09.2020 ರಂದು ನಿಧನ ಹೊಂದಿದರು.

**** ****

## ಬೊಕ್ಕಸ ಭಾಸ್ಕರ ರಾವ್

ಅಲಂಗಾರು ಅಮಿತ್ ಸ್ಟೋರ್‌ನ ಮಾಲಕ ಬೊಕ್ಕಸ ಭಾಸ್ಕರ ರಾವ್ 22.09.2020 ರಂದು ನಿಧನ ಹೊಂದಿದರು.

**** ****

## ಶ್ರೀಮತಿ ಶಾಂಭವಿ

ರಂಗಯ್ಯ ಹೆಬ್ಬಾರ್ ಮುದ್ರಾಡಿ ಇವರ ಪತ್ನಿ ಶ್ರೀಮತಿ ಶಾಂಭವಿ 13.09.2020 ರಂದು ನಿಧನ ಹೊಂದಿದರು.

**** ****

## ಶ್ರೀಮತಿ ಪದ್ಮಾಕ್ಷಿ

ದಿವಂಗತ ಬೆಳ್ಳರ್ಪಾಡಿ ಅನಂತರಾಮ ರಾವ್ ಅವರ ಪತ್ನಿ ಶ್ರೀಮತಿ ಪದ್ಮಾಕ್ಷಿ 17.09.2020 ರಂದು ಥಾಣೆಯಲ್ಲಿ ನಿಧನ ಹೊಂದಿದರು.


**** ****

## ಪಿಲಿಂಜ ದಯಾನಂದ ರಾವ್

ಮುಂಬಯಿ ನಿವಾಸಿ ಶ್ರೀ ಪಿಲಿಂಜ ದಯಾನಂದ ರಾವ್ ತಾ.12.10.2020ರಂದು ನಿಧನ ಹೊಂದಿದರು.


ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್

ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್

Cell : 9845644556

ಶೋಭಾ ಡಿಜಿಟಲ್

ಸ್ಟುಡಿಯೋ & ವೀಡಿಯೋ



ಬೆಳ್ವಾಯಿ-574213 (08258)-276177 (O)

ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com

Sharekhan

Visit : www.sharekhan.com



॥ ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ಪ್ರಸನ್ನಃ ॥

ಭಗವದ್ಭಕ್ತರೇ,

**ಬಲ್ಲ ಶ್ರೀ ತ್ರಿಶೂಲಿನಿ ದೇವಸ್ಥಾನ ಮತ್ತು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ**

ಶಾರ್ವರಿ ಸಂವತ್ಸರದ ನಿಜ ಅಶ್ವಯುಜ ಶುಕ್ಲಪಕ್ಷ ೧

**ದಿನಾಂಕ 17-10-2020 ಶನಿವಾರದಿಂದ ದಿನಾಂಕ 26-10-2020 ಸೋಮವಾರ ಪರ್ಯಂತ ಶ್ರೀ ಕ್ಷೇತ್ರದ ತಂತ್ರಿಗಳಾದ ಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ**

## ಮಹಾನವರಾತ್ರಿ ಉತ್ಸವಗಳು

ಜರಗಲಿರುವುದು. ಆ ಪ್ರಯುಕ್ತ ತಾವೆಲ್ಲರೂ ಬಂದು ಈ ಸತ್ಕಾರ್ಯಗಳಲ್ಲಿ ಭಾಗವಹಿಸಿ, ತನು-ಮನ-ದನಗಳಿಂದ ಸಹಕರಿಸಿ ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಯಂ.ವಿ.ಶ್ರೀವತ್ಸ , ಅರ್ಚಕರು**
ಅನುವಂಶಿಕ ಆಡಳಿತ ಮೊಕ್ತೇಸರರು

**ಕರುಣ್ ರಾವ್ ಬೆಳ್ಳೆ**
ಸಂಚಾಲಕರು

## ಶ್ರೀ ಶಾರದಾ ಮಂಟಪದ ಊಟದ ಕೊಠಡಿ ನವೀಕರಣಕ್ಕೆ ದೇಣಿಗೆ ನೀಡಿದವರು

**ಹಿಂದಿನ ಸಂಚಿಕೆಯಿಂದ ಮುಂದುವರಿದುದು :**

| | | |
|---|---|---|
| 1 | ಬಿ.ಜನಾರ್ಧನ್ ರಾವ್, ಬೈಲಕೆರೆ | 40005.00 |
| 2 | ಪಿ. ಬಾಲಕೃಷ್ಣ, ಬೆಂಗಳೂರು | 40000.00 |
| 3 | ಶ್ರೀಮತಿ ಗಂಗಮ್ಮ ಗೋವಿಂದ ರಾವ್, ಮಂಟ್ರಾಡಿ | 30000.00 |
| 4 | ವಾಸುದೇವ್ ರಾವ್ ಮತ್ತು ಅಣ್ಣ-ತಮ್ಮಂದಿರು, ಶೆಟ್ಟಿಬೆಟ್ಟು | 30000.00 |
| 5 | ಶ್ರೀಮತಿ ಚಂದ್ರಕಲಾ ಸರ್ವಜ್ಞ ರಾವ್ | 30000.00 |
| 6 | ಕೆ.ಆನಂದರಾವ್ ಸ್ಮರಣಾರ್ಥ ಕೆ.ವೆಂಕಟ್ರಮಣರಾವ್, ಕುಡಾಲ್ ಮತ್ತು ಕೆ.ಉಮೇಶ್‌ರಾವ್ | 30000.00 |
| 7 | ಎ.ಭಾಸ್ಕರ್ ರಾವ್, ಅಜ್ಜರಕಾಡು | 30000.00 |
| 8 | ಕೃಷ್ಣ ರಾವ್, ಕುಂಜಾರು, ಬೆಂಗಳೂರು | 12000.00 |
| 9 | ವಿಚ್.ನಿರಂಜನ್ ಭಟ್ | 11111.00 |
| 10 | ನಾಗರಾಜ್ ಪಿ.ಎಂ. ಹಿರಿಯಡ್ಕ | 10101.00 |
| 11 | ಶ್ರೀಮತಿ ಹೆಚ್. ರಶ್ಮಿ ರಾವ್, ಬೆಂಗಳೂರು | 10001.00 |
| 12 | ಪರಶುರಾಮ್ ರಂಗೆ ರಾವ್ | 10100.00 |
| 13 | ಶಂಕರ್ ರಾವ್, ನಂದಳಿಕೆ | 10100.00 |
| 14 | ಹರಿನಾರಾಯಣ ಭಂಡಿ.ಪಿ, ಪೆರ್ಡೂರು | 10000.00 |
| 15 | ಶ್ರೀಮತಿ ಸವಿತಾ ಮೋಹನ್ ರಾವ್ (ಶ್ರೀಮತಿ ಗಿರಿಜ ರಂಗ ರಾವ್) ಸ್ಮರಣೀಯ | 10000.00 |
| 16 | ಕೆ. ವೇಣುಗೋಪಾಲ್ ರಾವ್, ಅಂಬಲ್ಪಾಡಿ | 10000.00 |
| 17 | ಬಿ.ಜಯರಾಮ್ ರಾವ್ | 10000.00 |
| 18 | ಶೇಷಪ್ಪಯ್ಯ, ಬೈಂದೂರು | 10000.00 |
| 19 | ಎಂ.ಸಂತೋಷ್ ರಾವ್, ಚಿಟ್ಪಾಡಿ | 10000.00 |
| 20 | ಬಿ.ಸತ್ಯವಿಜಯ ರಾವ್, ವಾದಿರಾಜ ರಸ್ತೆ, ಉಡುಪಿ | 10000.00 |
| 21 | ಎಂ.ಪದ್ಮಾನಂದ ರಾವ್, ಮೂಡುಬೆಟ್ಟು, ಕಟಪಾಡಿ | 10000.00 |
| 22 | ಬಜೆ ಬಾಲಕೃಷ್ಣ ರಾವ್ | 5000.00 |
| 23 | ಎಂ. ನಾಗೇಶ್ ಶರ್ಮ, ಕೊಡಿಂಬಾಡಿ ಪುತ್ತೂರು | 5000.00 |

(ಮುಂದುವರಿಯುವುದು)



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯೆಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams





**RAJESH POWER PRESS**


PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**



ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.



**N. Laxmi Prasad**

ಕಾರ್ಯಕಾರಿಣಿ ಮಂಡಳಿ ಸದಸ್ಯರು



**D. K. District Used Vehicle Dealers & Agents Association (R.), Mangalore**
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com



*With Best Complimemts From*

**SRI M. SHAILESH RAO** Ph : 9448624324
B.E., Civil

Civil Engineer & Contractor

**SRI MALAVIKA ASSOCIATES**

KALSANKA-UDUPI ROAD, UDUPI.
Website : shreemaalavikaassociates.com


ಶ್ರೀ ಕ್ಷೇತ್ರ ಉದಯಾದ್ರಿ

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ** ಉದಯಾದ್ರಿ, ಪಡುಬಿದ್ರಿ, ಉಡುಪಿ ಜಿಲ್ಲೆ

ಪ್ರಿಯರೇ,

ಸ್ವಸ್ತಿ! ಶ್ರೀ ಶಾರ್ವರಿ ನಾಮ ಸಂ|ರದ ತುಲಾ ಮಾಸ ಆಶ್ವೀಜ ಶುದ್ಧ ಅಷ್ಟಮಿಯಂದು
**ದಿನಾಂಕ : 24-10-2020 ನೇ ಶನಿವಾರ ದುರ್ಗಾಷ್ಟಮಿಯಂದು ಶ್ರೀ ಕ್ಷೇತ್ರದಲ್ಲಿ**

## ಶ್ರೀ ಚಂಡಿಕಾ ಹೋಮವು

ಸಂಪನ್ನಗೊಳ್ಳಲಿರುವುದು ಶ್ರೀ ಗುರುದೇವತಾನುಗ್ರಹದಿಂದ ನೆರವೇರಲಿರುವ ಈ ದೇವತಾ ಕಾರ್ಯಗಳಲ್ಲಿ ತಾವೆಲ್ಲರೂ ಭಾಗವಹಿಸಿ, ಸಿರಿಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸಿ, ಶ್ರೀ ದೇವಿಯ ಪೂರ್ಣಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಜಗದಾಭಿರಾಮ ಸ್ವಾಮಿ**
ಪ್ರಧಾನ ಅರ್ಚಕರು

**ಪಿ.ರಘುವೀರ ರಾವ್**
ಅಧ್ಯಕ್ಷರು

**ಕರುಣಾಕರ್ ಬೆಳ್ಳೆ**
ಗೌರವ ಅಧ್ಯಕ್ಷರು

**ಶ್ರೀನಿವಾಸ ಶರ್ಮ, ಪಾದೆಬೆಟ್ಟು**
ಕಾರ್ಯದರ್ಶಿ

**ಪಿ.ಡಿ. ಶೇಖರ ರಾವ್**
ಖಜಾಂಚಿ

ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.) ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು

**ಚಂಡಿಕಾಯಾಗ ಸೇವಾ ಬಾಬ್ತು ರೂ. 200/- ಪಾವತಿಸಿ ಸಹಕರಿಸಬೇಕಾಗಿ ವಿನಂತಿ.**

॥ ಶ್ರೀ ಭಗವತಿ ದುರ್ಗಾಪರಮೇಶ್ವರಿ ಪ್ರಸನ್ನಾ।।

## ಶ್ರೀ ಭಗವತಿ ದುರ್ಗಾಪರಮೇಶ್ವರಿ ದೇವಸ್ಥಾನ, ಕೆರ್ಗಾಲು

**ಶ್ರೀ ಕ್ಷೇತ್ರದಲ್ಲಿ ತಾ.17.10.2020ನೇ ಶನಿವಾರದಿಂದ 25.10.2020ನೇ ಆದಿತ್ಯವಾರದ ವರೆಗೆ**

## ಶರನ್ನವರಾತ್ರಿ ಮಹೋತ್ಸವ

ಪ್ರತಿ ದಿನ ಬೆಳಿಗ್ಗೆ 10-00 ಗಂಟೆಯಿಂದ ಪ್ರಾರಂಭವಾಗಿ ಮಧ್ಯಾಹ್ನ 12.30ಕ್ಕೆ **ಮಹಾಮಂಗಳಾರತಿ** ಹಾಗೂ ಸಂಜೆ 4.30 ರಿಂದ **ಚಂಡಿಕಾಪಾರಾಯಣ** ಹಾಗೂ ರಾತ್ರಿ 7.00 ಗಂಟೆಗೆ **ಮಹಾಪೂಜೆ**

**ತಾ.25-10-2020ರ ವಿಜಯದಶಮಿಯಂದು ಭಕ್ತಾದಿಗಳಿಂದ ಸಾಮೂಹಿಕ ಚಂಡಿಕಾಹೋಮ.**

ಸರ್ವರಿಗೂ ಆದರದ ಸ್ವಾಗತ

## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ

ಪ್ರಿಯ ಭಗವದ್ಭಕ್ತರೇ, ತಾ.18-09-2020

ಸ್ವಸ್ತಿ! ಶ್ರೀ ಶಾರ್ವರಿ ಸಂವತ್ಸರದ ಆಶ್ವೀಜ ಶುಕ್ಲ ಪ್ರತಿಪತ್ತಿನಿಂದ ದಶಮಿ ಪರಿಯಂತ
**(ದಿನಾಂಕ 17-10-2020 ರಿಂದ 25-10-2020)**

**"ಶರನ್ನವರಾತ್ರಿ ಉತ್ಸವ" ಹಾಗೂ "ಶ್ರೀ ಚಂಡಿಕಾ ಹೋಮ"**

ನಡೆಯಲಿರುವುದು. ತಾವೆಲ್ಲರೂ ಶ್ರೀ ದೇವಿಯ ಸನ್ನಿಧಿಗೆ ಆಗಮಿಸಿ, ಶ್ರೀ ದೇವಿಯ ತೀರ್ಥ ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುವ,

**ಯಂ.ನಾಗೇಶ ಶರ್ಮ**
ಅರ್ಚಕರು (ಮೊ : 9901247080)

**ಟಿ.ಅಣ್ಣಪ್ಪಯ್ಯ, ತೆಂಕಿಲ**
ಅಧ್ಯಕ್ಷರು (ಫೋ : 08251-232491)

**ಮತ್ತು ಆಡಳಿತ ಮಂಡಳಿ ಸರ್ವಸದಸ್ಯರು**

**ತಾ.17-10-2020 ರಿಂದ 25-10-2020 ರ ತನಕ ಪ್ರತಿ ದಿನ ರಾತ್ರಿ ಗಂಟೆ 8.00ಕ್ಕೆ ರಂಗ ಪೂಜೆ ನಡೆಯಲಿದೆ.**


SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE



Ph : 98459 92859

**Ganesh Hebbar & Associates**

CHARTERED ACCOUNTANT

S.M.S.P. Complex, Udupi - 576 101.



ಶುಭಾಶಯಗಳೊಂದಿಗೆ

**ಹೆಬ್ಬಾರ್ ಎಂಟರ್‌ಪ್ರೈಸಸ್**

ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ-576101.

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.

ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

## ಸಂಘದ ವಿದ್ಯಾನಿಧಿಗೆ ದೇಣಿಗೆ



**ಶ್ರೀ ಪ್ರಕಾಶ ರಾವ್ ಮೂಡಬೆಟ್ಟು :** ಕಟಪಾಡಿ ಮೂಡಬೆಟ್ಟು ಶ್ರೀ ಶಿವರಾವ್ ಹಾಗೂ ಶ್ರೀಮತಿ ಪ್ರಸನ್ನ ಇವರ ಪುತ್ರ ಶ್ರೀ ಪ್ರಕಾಶ ರಾವ್‌ರವರು ಆರ್ಕಿಟೆಕ್ಚರ್ ಇಂಜಿನಿಯರ್ ಪದವೀಧರರಾಗಿದ್ದು ಕತಾರಿನಲ್ಲಿ ಉದ್ಯೋಗದಲ್ಲಿದ್ದಾರೆ. ಇವರು ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ವಿದ್ಯಾರ್ಥಿ ವೇತನದ ಸ್ಥಿರನಿಧಿಗೆ ರೂ.50,000/– ದೇಣಿಗೆ ನೀಡಿರುತ್ತಾರೆ. ಇವರಿಗೆ ಸಂಘವು ಚಿರಋಣಿಯಾಗಿದೆ.



**ಶ್ರೀ ಮಾಂಟ್ರಾಡಿ ಮೋಹನರಾವ್ ಕಕ್ಕುಂಜೆ :** ಶ್ರೀ ಮಾಂಟ್ರಾಡಿ ಮೋಹನರಾವ್ ಕಕ್ಕುಂಜೆಯವರು ನಮ್ಮ ಸಂಘದ ವಿದ್ಯಾರ್ಥಿವೇತನ ನಿಧಿಗೆ ರೂ.25,000/–ಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಇವರು ನಮ್ಮ ಸಂಘದ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಇದೇ ರೀತಿ ಹಿಂದೆಯೂ ಹಲವು ಬಾರಿ ದೊಡ್ಡ ಮೊತ್ತದ ದೇಣಿಗೆಯನ್ನು ನೀಡಿ ಸಂಘವನ್ನು ಬಲಪಡಿಸಿದ್ದಾರೆ. ಇವರಿಗೆ ಸಂಘವು ಆಭಾರಿಯಾಗಿದೆ.

## ಡಾ| ವಿಶಾಲ್ ರಾವ್‌ರವರಿಗೆ ಗೌರವ



ಬೆಂಗಳೂರಿನ ಖ್ಯಾತ ವೈದ್ಯರಾದ ನಮ್ಮ ಸಮಾಜದ ಡಾ| ವಿಶಾಲ್ ರಾವ್‌ರವರಿಗೆ ಅಮೇರಿಕಾದ ಪ್ರತಿಷ್ಠಿತ ಸಂಸ್ಥೆಯಾದ ಅಮೇರಿಕನ್ ಕಾಲೇಜ್ ಆಫ್ ಸರ್ಜನ್ಸ್ ಫೆಲೋಶಿಪ್ ಪ್ರಧಾನಿಸಿದೆ.

## ಶ್ರೀ ನಾರಾಯಣ ಉಬರಳೆಯವರಿಗೆ ಸನ್ಮಾನ



14.09.2020 ರಂದು ಬೆಳ್ತಂಗಡಿಯಲ್ಲಿ ನಡೆದ ಸಮಾರಂಭದಲ್ಲಿ ಮಾದರಿ ಕೃಷಿಕ ಸನ್ಮಾನವನ್ನು ನಮ್ಮ ಸಮಾಜದ ಶ್ರೀ ನಾರಾಯಣ ಉಬರಳೆ ಇವರಿಗೆ ಪ್ರಧಾನಿಸಲಾಯಿತು.

## ಸಂಚಾಲಕರಾಗಿ ಶ್ರೀನಿವಾಸ ಶರ್ಮ



ಉಡುಪಿ ಜಿಲ್ಲಾ ಬಿಜೆಪಿ ಪಂಚಾಯತ್ ರಾಜ್ ಪ್ರಕೋಷ್ಠದ ಸಹ ಸಂಚಾಲಕರಾಗಿ ಶ್ರೀನಿವಾಸ ಶರ್ಮ ಪಡುಬಿದ್ರಿಯವರು ಆಯ್ಕೆಯಾಗಿರುತ್ತಾರೆ.

## ಎ.ಪಲ್ಲವಿ ರಾವ್



ಉಡುಪಿಯ ಎ.ಪಲ್ಲವಿ ರಾವ್ ಇವಳು ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 625ರಲ್ಲಿ 608 (97.28%) ಅಂಕಗಳನ್ನು ಪಡೆದು ಉತ್ತೀರ್ಣರಾಗಿರುತಾಳೆ. ಇವಳು ಸರ್ಕಾರಿ ಸಂಯುಕ್ತ ಪ್ರೌಢಶಾಲೆ ವಳಕಾಡು ಉಡುಪಿ ಇದರ ವಿದ್ಯಾರ್ಥಿನಿ ಆಗಿರುತ್ತಾಳೆ. ಕರ್ನಾಟಕ ಪ್ರೌಢಶಿಕ್ಷಣ ಇಲಾಖೆಯವರು ನಡೆಸಿದ ಕರ್ನಾಟಕ ಶಾಸ್ತ್ರೀಯ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ 92% ಗಳಿಸಿರುತ್ತಾಳೆ. ಹಾಗೆಯೇ ಡ್ರಾಯಿಂಗ್ ಹೈಯರ್ ಗ್ರೇಡ್ ಪರೀಕ್ಷೆಯಲ್ಲಿಯೂ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾಳೆ. ಇವಳು ಆಳುಗ್ಗೇಲು ಸುಭಾಸ್‌ಚಂದ್ರರಾವ್ ಹಾಗೂ ಸಂಗೀತಾರವರ ಪುತ್ರಿ.

## ಶ್ರೇಯಾ



ಮಂಗಳೂರಿನ ಶಾರದಾ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಹಾಗೂ ಕೆ. ರಾಜೇಂದ್ರ ಕುಮಾರ್ ಸುಕನ್ಯಾ ದಂಪತಿಗಳ ಪುತ್ರಿ ಶ್ರೇಯಾ ಪಿ.ಯು.ಸಿ. ಪರೀಕ್ಷೆಯಲ್ಲಿ 95% ಅಂಕಗಳಿಸಿದ್ದಾಳೆ.

**ಶುಭ ವಿವಾಹ :** ನರಸೀಪುರದ ಶ್ರೀ ಸುಬ್ರಹ್ಮಣ್ಯ ಹೆಬ್ಬಾರ್ ಹಾಗೂ ಶ್ರೀಮತಿ ಚಂದ್ರಾವತಿ ಹೆಬ್ಬಾರ್‌ರವರ ಪುತ್ರಿ **ಚಿ| ಸೌ| ಸೌಮ್ಯ** ಮತ್ತು ಬೆಂಗಳೂರಿನ ಶ್ರೀಮತಿ ಶೋಭಾ ಶಂಕರ್‌ರ ಪುತ್ರ **ಚಿ| ರಾ| ಧನುಷ್** ಇವರ ವಿವಾಹವು ದಿನಾಂಕ **31–07–2020**ರಂದು ನೀಲಾವರದ ಶ್ರೀ ಶಾರದಾ ಸಭಾ ಭವನದಲ್ಲಿ ನಡೆಯಿತು.


*With Best Compliments from :*



*Dr. Sanath S. Rao*
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)


## ಶಾರದಾ ಮಂಟಪದಲ್ಲಿ ಸ್ವಚ್ಛತಾಕಾರ್ಯ



ನವರಾತ್ರಿ ಪ್ರಯುಕ್ತ ತಾ.11.10.2020 ರಂದು ಶ್ರೀ ಶಾರದಾ ಮಂಟಪದ ವಠಾರವನ್ನು ಸ್ವಚ್ಛಗೊಳಿಸಲಾಯಿತು. ಸ್ವಚ್ಛತಾ ಅಭಿಯಾನದಲ್ಲಿ ಅಧ್ಯಕ್ಷರಾದ ಮಂಜುನಾಥ್ ಹೆಬ್ಬಾರ್ ಜತೆ ಕಾರ್ಯದರ್ಶಿಯಾದ ಪ್ರಭಾಕರ್ ಭಂಡಿ ನಿರ್ದೇಶಕರಾದ ಸಂತೋಷ್ ರಾವ್ ಚಿಟ್ಪಾಡಿ, ಮ್ಯಾನೇಜರ್ ಅಜಿತ್ ರಾವ್, ಸಹಾಯಕ ಮ್ಯಾನೇಜರ್ ನಾಗಭೂಷಣ್ ರಾವ್, ವಿನೋದ್ ಕುಮಾರ್, ಮೋಹನ್ ದೇವ್ ಮತ್ತು ಸ್ಥಳೀಯ ಭಕ್ತರು ಭಾಗವಹಿಸಿದ್ದರು. ಇನ್ನಷ್ಟು ಸ್ವಚ್ಛತಾ ಕಾರ್ಯ ಮುಂದಿನ ದಿನಗಳಲ್ಲಿ ಮಾಡಬೇಕಾಗಿದೆ ಹಾಗೂ ಭಾಗವಹಿಸುವ ಎಲ್ಲರಿಗೂ ಸಂಘದ ಪರವಾಗಿ ಧನ್ಯವಾದವನ್ನು ಅಧ್ಯಕ್ಷರು ತಿಳಿಸಿದ್ದಾರೆ.

## ಶ್ರೀ ಶಂಕರ ಪ್ರತಿಷ್ಠಾನ (ರಿ.) ಕಾರ್ಕಳ ಇದರ ವಾರ್ಷಿಕ ಮಹಾಸಭೆ



ತಾ.12.09.2020ರಂದು ಸಂಘದ 2019–20ನೇ ಸಾಲಿನ ವಾರ್ಷಿಕ ಮಹಾಸಭೆಯು ಸಮಾಜದ ತಾಲೂಕಿನ ಹಿರಿಯರಾದ ಶ್ರೀ ಐ.ಕೆ.ಕೃತಿವಾಸ ಶರ್ಮ, ಶ್ರೀ ರತ್ನಾಕರ ರಾವ್ ಪರಪು ಹಾಗೂ ಶ್ರೀ ರಾಮ ಮೋಹನ ರಾವ್ ಮುನಿಯಾಲು ಹಾಗೂ ಶ್ರೀಮತಿ ಸಾವಿತ್ರಿ ಮನೋಹರ್ ಹಾಗೂ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಕೇಶವ ರಾವ್ ಕುಕ್ಕುಂದೂರು ಇವರುಗಳು ದೀಪ ಬೆಳಗಿಸುವ ಮೂಲಕ ಸಂಘದ ಸಭಾಂಗಣ ಪ್ರಸಾದ ಭವನದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಕೇಶವ ರಾವ್ ರವರು ವಹಿಸಿದ್ದರು. ಶ್ರೀಮತಿ ಸೌಮ್ಯ ರಾವ್, ಶ್ರೀಮತಿ ಮಲ್ಲಿಕಾ ಹಾಗೂ ಶ್ರೀಮತಿ ಐ.ಕೆ. ಪ್ರಭಾವತಿ ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ತದನಂತರ ಕಾರ್ಯದರ್ಶಿ ಶ್ರೀ ಕೆ. ಹರಿಶ್ಚಂದ್ರ ರಾವ್ ರವರು ವರ್ಷದ ವರದಿಯನ್ನು ವಾಚಿಸಿದರು. ಹಾಗೂ ಖಜಾಂಚಿ ಶ್ರೀ ಕೋದಂಡ ರಾಮ ರವರು ವಾರ್ಷಿಕ ಲೆಕ್ಕಪತ್ರವನ್ನು ಮಂಡಿಸಿದರು. ಮುಂದೆ ಕಾರ್ಕಳ ತಾಲೂಕಿನಲ್ಲಿಯ ನಮ್ಮ ಸಮಾಜದ ದ್ವಿತೀಯ ಪಿ.ಯು.ಸಿ. ಯಲ್ಲಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಕು.ಪ್ರದೀಪ್ ರಾವ್ ಹೊಸ್ಮಾರು, ಕುಮಾರಿ ಪ್ರಜ್ಞಶ್ರೀ ಹೆಬ್ಬಾರ್ ಬೈಲೂರು, ಕು.ಸುಜನ್ ರಾವ್ ಕಾರ್ಕಳ ಹಾಗೂ ಕುಮಾರಿ ಅನನ್ಯ ಹೆಬ್ಬಾರ್ ಕಬ್ಬಿನಾಲೆ ಮತ್ತು ಎಸ್.ಎಸ್.ಎಲ್.ಸಿ. ಯ ಕು. ಕಾರ್ತಿಕ್ ಹೆಬ್ಬಾರ್ ಕಾರ್ಕಳ ಹಾಗೂ ಕು.ಶ್ರೀವತ್ಸ ರಾವ್ ಬಜೆಗೋಳಿ ಇವರುಗಳನ್ನು ಸಂಘದ ವಿದ್ಯಾನಿಧಿಯ ವತಿಯಿಂದ ವಿದ್ಯಾರ್ಥಿವೇತನವನ್ನು ನೀಡುವುದರೊಂದಿಗೆ ಸನ್ಮಾನಿಸಲಾಯಿತು. ಇದಲ್ಲದೆ ಪಿ.ಯು.ಸಿ. ಯಲ್ಲಿ ಪ್ರಥಮ ಬಂದವರಿಗೆ ವಿದ್ಯಾಭಿಮಾನಿಗಳಾದ, ದಿ. ದೇವರಾವ್ ನಕ್ರೆ ಹಾಗೂ ದಿ. ಶಿವ ರಾವ್ ನಕ್ರೆ ಇವರ ಸ್ಮರಣಾರ್ಥವಾಗಿ ಮಗಳಾದ ಶ್ರೀಮತಿ ಅನುರಾಧ ರಾವ್ ನಕ್ರೆ, ಮತ್ತು ಪಿ.ಯು.ಸಿ. ಯಲ್ಲಿ ಕೆಮಿಸ್ಟ್ರಿಯಲ್ಲಿ ಪ್ರಥಮ ಬಂದವರಿಗೆ, ದಿ. ಪ್ರೊ. ಸೂರ್ಯನಾರಾಯಣ ರಾವ್ ರವರ ಸ್ಮರಣಾರ್ಥ ಪತ್ನಿ ಶ್ರೀಮತಿ ಇಂದಿರಾ ರಾವ್ ಹಾಗೂ ಮಗ ಡಾಕ್ಟರ್ ಶರತ್ ಕುಮಾರ್ ಮಣಿಪಾಲ (ಕೆ.ಎಂ.ಸಿ. ಮಣಿಪಾಲ ಆಸ್ಪತ್ರೆಯ ಡೀನ್), ಹಾಗೂ ಎಸ್.ಎಸ್.ಎಲ್.ಸಿ. ಗಣಿತ ವಿಸಯದಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ, ದಿ. ಪುಂಡಲೀಕ ವರದ ರಾವ್ ಇವರ ಸ್ಮರಣಾರ್ಥ, ಶ್ರೀಮತಿ ಉಷಾ ರಾಜಶೇಖರ್ ರಾವ್ ಹಿರ್ಗಾನ ಇವರುಗಳು ಪ್ರತೀ ವರ್ಷದಂತೆ ಈ ವರ್ಷವು ಕೂಡಾ ವಿದ್ಯಾರ್ಥಿ ಪುರಸ್ಕಾರವನ್ನು ನಗದು ರೂಪದಲ್ಲಿ ನೀಡಿ ಪ್ರೋತ್ಸಾಹಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರಾದ ಕರ್ವಾಲು ಸತೀಶ್ ರಾವ್ ರವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ ಕಾರ್ಕಳ ಶಾಖೆಯ ಪ್ರಬಂಧಕರು ಬ್ಯಾಂಕಿನಲ್ಲಿರುವ ಸವಲತ್ತುಗಳ ಬಗ್ಗೆ ವಿವರಣೆ ನೀಡಿ ಸಮಾಜ ಬಾಂಧವರು ಇದರ ಸದುಪಯೋಗವನ್ನು ಪಡೆದುಕೊಂಡು ಸಹಕಾರ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಸಹಕಾರ ಸಂಘದ ಪರವಾಗಿ ವಿನಂತಿ ಮಾಡಿಕೊಂಡರು. ನಮ್ಮ ಸಮಾಜದ ಪುತ್ತೂರಿನಲ್ಲಿರುವ ಹಾಸ್ಟೆಲ್ ಕಟ್ಟಡದಲ್ಲಿರುವ ಒಂದು ಕೊಠಡಿಯನ್ನು ನಮ್ಮ ಕಾರ್ಕಳ ಸಂಘವು ಪಡೆದು ಸುಬ್ರಹ್ಮಣ್ಯ ಸಭಾಕ್ಕೆ ಸಹಕಾರ ನೀಡಬೇಕೆಂದು ಕೋರಿ ಬರೆದ ಪತ್ರವನ್ನು ಸಭೆಯ ಮುಂದೆ ಶ್ರೀಮತಿ ವತ್ಸಲಾ ಶಾನ್‌ಭಾಗ್ ರವರು ವಾಚಿಸಿದರು. ವಾರ್ಷಿಕ ಮಹಾಸಭೆಗೆ ಆಗಮಿಸಿದ ಎಲ್ಲರಿಗೂ ಉಪಹಾರದ ವ್ಯವಸ್ಥೆಯನ್ನು ಮಾಡಿದ ಪ್ರಾಯೋಜಕರಾದ, ಶ್ರೀಮತಿ ಮತ ಶ್ರೀ ಭವಾನಿಶಂಕರ ರಾವ್, ಪ್ರಸಾದಭವನ, ಶ್ರೀಮತಿ ಮತ್ತು ಶ್ರೀ ವಿಜಯ ರಾವ್ ಪರಪು ಹಾಗೂ ಶ್ರೀಮತಿ ಮತ್ತು ಶ್ರೀ ರತ್ನಾಕರ ರಾವ್ ಕೊಕ್ರಾಡಿ ಇವರಿಗೆ ಅಧ್ಯಕ್ಷರು ಹೂವನ್ನು ನೀಡುವುದರೊಂದಿಗೆ ಗೌರವಿಸಲಾಯಿತು. ಹಾಗೆಯೇ ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಸನ್ಮಾನಕ್ಕೆ ಸಹಕರಿಸಿದಂತಹ ಶ್ರೀಮತಿ ಸಾವಿತ್ರಿ ಮನೋಹರ ರಾವ್, ಶ್ರೀ ರತ್ನಾಕರ ರಾವ್ ಹಾಗೂ ಕೆ. ಹರಿಶ್ಚಂದ್ರ ರಾವ್ ಇವರಿಗೆ ಅಭಿನಂದನೆ ಸಲ್ಲಿಸಲಾಯಿತು. ವೇದಿಕೆಯಲ್ಲಿ ಅಧ್ಯಕ್ಷರಾದ ಮಾನ್ಯ ಕೇಶವ ರಾವ್, ಕಾರ್ಯದರ್ಶಿ ಕೆ.ಹರಿಶ್ಚಂದ್ರ ರಾವ್, ಕೋಶಾಧಿಕಾರಿ ಶ್ರೀ ಕೋದಂಡರಾಮ ರಾವ್, ಸಮಾಜದ ಹಿರಿಯರಾದ ಶ್ರೀ ರಾಮ್ ಮೋಹನ್ ರಾವ್ ಮುನಿಯಾಲು ಶ್ರೀ ರಮೇಶ್ ರಾವ್ (ಅ.ಂ), ಶ್ರೀಮತಿ ಶೈಲಾ ರಮೇಶ್ ರಾವ್ ಹಾಗೂ ಶ್ರೀಮತಿ ಐ.ಕೆ. ಪ್ರಭಾವತಿ ಶರ್ಮ ಉಪಸ್ಥಿತರಿದ್ದರು. ಹಾಗೆಯೇ ಸಂಘದ ಪದಾಧಿಕಾರಿಗಳೆಲ್ಲರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆಗಮಿಸಿದ ಎಲ್ಲರಿಗೂ ಶ್ರೀಮತಿ ಶೈಲಜ ರಮೇಶ್ ರಾವ್ ರವರು ಸ್ವಾಗತಿಸಿ, ಶ್ರೀಯುತ ಸುಬ್ರಹ್ಮಣ್ಯ ಶರ್ಮರವರು ಧನ್ಯವಾದ ನೀಡುವುದರೊಂದಿಗೆ, ಶ್ರೀಮತಿ ಸೌಮ್ಯ ಭವಾನಿ ಶಂಕರ ರಾವ್ ರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.






ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಕಡಬದ ಸತ್ಯಶ್ರೀ ಮೆಡಿಕಲ್‌ನ ಮಾಲಕ ಶ್ರೀ ರಾಜೇಶ ಕೋಲ್ತೆ ಹಾಗೂ ಶ್ರೀಮತಿ ಮಲ್ಲಿಕಾ ಕೋಲ್ತೆಯವರ 7 ವರ್ಷದ ಪುತ್ರಿ ಕು| ಕೃತಿ, "ಬಾಲಕೃಷ್ಣ"ನ ವೇಷ ಧರಿಸಿ "ಗೋಕುಲ ಬಾಲಕನೆ" ಎಂಬ ಮಲಯಾಳಂ ಭಾಷೆಯ ಹಾಡಿಗೆ ನೃತ್ಯ ಮಾಡಿ, ಇನ್ನೊಂದು ಪಾತ್ರದಲ್ಲಿ ಶಾಲಾ ಅಧ್ಯಾಪಕಿಯಾಗಿ ಅಭಿನಯಿಸಿ ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿಗಳ ಸಂಘ, ಮಂಗಳೂರು ಪ್ರಾಯೋಜಿತ ಛದ್ಮವೇಷ ಸ್ಪರ್ಧೆಯಲ್ಲಿ ಪ್ರಶಂಸಾ ಪತ್ರ ಪಡೆದಿದ್ದಾಳೆ.


**With Best Compliments From :**

***Rajathadri Hotel Pvt. Ltd.
Lodging & Boarding




Sri Ramesh Shanubhag, Usha, Sanketh and Kavitha
Directors

OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

# ಸ್ಥಾನಿಕ ಬ್ರಾಹ್ಮಣ ಪುರೋಹಿತರ ಸಂಘ ಉದ್ಘಾಟನೆ




ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ – ಅರ್ಚಕ ಪರಿಪಾಲನ ಸಭಾ ಮಂಗಳೂರು ಇದರ ಉದ್ಘಾಟನೆಯು ದಿನಾಂಕ 04.10.2020 ಭಾನುವಾರದಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜರಗಿತು. ಕಾರ್ಯಕ್ರಮ ದ್ವಾದಶ ನಾರಿಕೇಳ ಗಣಯಾಗ, ಐಕ್ಯಮತ್ಯ ಸೂಕ್ತ ಜಪ ಹೋಮದೊಂದಿಗೆ ಪ್ರಾರಂಭವಾಯಿತು. ಮಹಾಗಣಪತಿ ಹೋಮದ ಪವಿತ್ರಪಾಣಿಯಾಗಿ ಶ್ರೀಮತಿ ಪುಷ್ಪಲತಾ ಮತ್ತು ಶ್ರೀ ಶ್ರೀನಿವಾಸ ದಂಪತಿಗಳು ಹಾಗೂ ಐಕ್ಯಮತ್ಯ ಸೂಕ್ತ ಹೋಮದ ಪವಿತ್ರ ಪಾಣಿಯಾಗಿ ಶ್ರೀಮತಿ ಕನಕವಲ್ಲಿ ಮತ್ತು ಶ್ರೀ ಕೇದಿಗೆ ಹರ್ಷಕುಮಾರ ದಂಪತಿಗಳು ಸಹಕಾರ ನೀಡಿದರು. ವೇದಮೂರ್ತಿ ಕೃಷ್ಣರಾಜ ಭಟ್ ಮತ್ತು ವೇದಮೂರ್ತಿ ಸುಬ್ರಹ್ಮಣ್ಯ ಭಟ್‌ರಿಂದ ವೇದಘೋಷ, ಮಾತೆಯರ ಪ್ರಾರ್ಥನೆ ಹಾಗೂ ವೇದಮೂರ್ತಿ ಪ್ರಶಾಂತ್ ಶರ್ಮ ಮತ್ತು ವೇದಮೂರ್ತಿ ಹರೀಶ್ ಭಟ್ ಹೊಸ್ಮಾರ್ ಇವರ ಗುರುವಂದನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಂಘದ ಅಧ್ಯಕ್ಷರಾದ ವೇದಮೂರ್ತಿ ಗುರುಪ್ರಸಾದ್ ಹೆಬ್ಬಾರ್ ಅಭ್ಯಾಗತರಿಗೆ ಕಿರು ಪರಿಚಯದೊಂದಿಗೆ ಸ್ವಾಗತವನ್ನು ನೆರವೇರಿಸಿದರು. ಸಂಘದ ಧ್ಯೇಯೋದ್ದೇಶದ ಬಗ್ಗೆ ಕಾರ್ಯದರ್ಶಿ ವೇದಮೂರ್ತಿ ಚಿದಾನಂದ ಶ್ಯಾನುಭೋಗರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಮಂಡಿಸಿದರು. ದೀಪ ಪ್ರಜ್ವಲನೆ ಮೂಲಕ ವೇದಮೂರ್ತಿ ಬ್ರಹ್ಮಶ್ರೀ ಭವಾನಿಶಂಕರ ಉಪಾಧ್ಯಾಯರು ಸಂಘವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಪ್ರಧಾನ ಉಪನ್ಯಾಸಕರಾದ ವೇದಬ್ರಹ್ಮಶ್ರೀ ವಿದ್ಯಾವಾರಿಧಿ ಋಗ್ವೇದ ಸಲಕ್ಷಣ ಘನಪಾಠಿ ವ್ಯಾಕರಣ ವಿದ್ವಾನ್ ಡಾ। ಸತ್ಯಕೃಷ್ಣ ಭಟ್ ಅವರು ಬ್ರಾಹ್ಮಣ ಮತ್ತು ಬ್ರಾಹ್ಮಣ್ಯದ ರಕ್ಷಣೆ ಬಗ್ಗೆ ಮನಮುಟ್ಟುವಂತೆ ವಿಷಯ ಮಂಡಿಸಿದರು. ಶೃಂಗೇರಿ ಮಠದ ಉಡುಪಿ ಪ್ರಾಂತೀಯ ಧರ್ಮಾಧಿಕಾರಿಗಳಾದ ವೇದಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರು ಸಂಘ ಮುನ್ನಡೆಸಿಕೊಂಡು ಹೋಗಲು ಬೇಕಾದ ಅಗತ್ಯ ಸಲಹೆಗಳನ್ನು ನೀಡಿ ಪ್ರೋತ್ಸಾಹಿಸಿದರು. ಸಂಘದ ಅಧ್ಯಕ್ಷರು ಧರ್ಮಪ್ರಸಾರ ನಿಧಿ ಹಾಗೂ ಆಪತ್‌ಬಂಧು ನಿಧಿಯನ್ನು ಪ್ರಕಟಿಸಿದರು. ಉದ್ಘಾಟನೆಗೈದ ವೇದಬ್ರಹ್ಮಶ್ರೀ ಭವಾನಿಶಂಕರ ಉಪಾಧ್ಯಾಯರು ಧರ್ಮ ಪ್ರಸಾರ ನಿಧಿಗೆ ಸುಮಾರು 1 ಲಕ್ಷ ದೇಣಿಗೆ ನೀಡಿದರು. ಸಭಾಧ್ಯಕ್ಷರಾದ ಪುತ್ತೂರಿನ ಶ್ರೀ ಜಗನ್ನಿವಾಸ ರಾವ್‌ರವರು ಮಾತನಾಡಿ, ಪುರೋಹಿತರು ತಮ್ಮ ಗುರು ಸ್ಥಾನವನ್ನು ಹೇಗೆ ಕಾಪಾಡಿಕೊಂಡು ಹೋಗಬೇಕು ಎಂದು ಮನವರಿಕೆ ಮಾಡಿ ಪ್ರೋತ್ಸಾಹಿಸಿದರು. ವೇದಮೂರ್ತಿ ಜಗದಾಭಿರಾಮ ಸ್ವಾಮಿಯವರು ಧನ್ಯವಾದ ಸಮರ್ಪಣೆಯನ್ನು ಸಲ್ಲಿಸಿದರು. ಕಾರ್ಯಕ್ರಮದ ಸಂಪೂರ್ಣ ಪ್ರಾಯೋಜಕತ್ವವನ್ನು ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ವೇದಮೂರ್ತಿ ಪ್ರತಾಪ್ ಶರ್ಮಾರವರು ನಿರ್ವಹಿಸಿದರು. ಕರುಣ್ ರಾವ್ ಬೆಳ್ಳೆ, ವೇದಮೂರ್ತಿ ಜಗದೀಶ ಉಪಾಧ್ಯಾಯ, ವೇದಮೂರ್ತಿ ರಂಗನಾಥ ಭಟ್, ವೇದಮೂರ್ತಿ ಹರೀಶ್ ಭಟ್ ಹಾಗೂ ವೇದಮೂರ್ತಿ ಸತೀಶ್ ಭಟ್ ಮತ್ತಿತರರು ಸಹಕರಿಸಿದರು.

# ಬಾರ್ಕೂರು ಸಂಘದ ಉದ್ಘಾಟನೆ



ಬಾರ್ಕೂರಿನ ಹಾಗೂ ಸುತ್ತಮುತ್ತಲ ಗ್ರಾಮಗಳಾದ ಮಂದರ್ತಿ, ಕೊಕ್ಕರ್ಣೆ ಇತ್ಯಾದಿ ಊರುಗಳಲ್ಲಿ ನೆಲೆಸಿರುವ ನಮ್ಮ ಸಮಾಜದ ಸುಮಾರು 80 ಕುಟುಂಬಗಳ ಸದಸ್ಯರು ಸೇರಿ ನೂತನವಾದ **ಶ್ರೀ ಜ್ಞಾನಶಕ್ತಿ ಸ್ಥಾನಿಕ ಬ್ರಾಹ್ಮಣ ಸಭಾ** ಎಂಬ ನೂತನ ಸಂಘವನ್ನು ಬಾರ್ಕೂರಿನಲ್ಲಿ ತಾರೀಕು 11.10.2020 ರಂದು ಆರಂಭಿಸಿದರು. ಈ ಸಂಘದ ಉದ್ಘಾಟನೆಯನ್ನು ದೀಪ ಬೆಳಗಿಸುವುದರೊಂದಿಗೆ ನಮ್ಮ ಸಮಾಜದ ಹಿರಿಯ ಧುರೀಣ ಶ್ರೀ ಸಿ.ಎಸ್.ರಾವ್ ನೆರವೇರಿಸಿದರು. ಶೃಂಗೇರಿ ಮಠದ ಉಡುಪಿ ಪ್ರಾಂತ್ಯದ ಧರ್ಮಾಧಿಕಾರಿಗಳಾದ ಶ್ರೀ ವಾಗೀಶ ಶಾಸ್ತ್ರಿಯವರು ಉಪಸ್ಥಿತರಿದ್ದು ಸಂಸ್ಥೆಗೆ ಶುಭಾಶಯ ಕೋರಿದರು. ಶ್ರೀ ಶಾರದಾ ಪತ್ರಿಕೆಯ ಸಂಪಾದಕರಾದ ಡಾ। ವೈ ಸುದರ್ಶನ್ ರಾವ್ ಹಾಗೂ ಕುಂದಾಪುರ ಸಂಘದ ಅಧ್ಯಕ್ಷರಾದ ಶ್ರೀಕೃಷ್ಣ ಗೋಪಾಲ ಹೆಬ್ಬಾರ್ ಹಾಗೂ ವಿಪ್ರ ವೇದಿಕೆಯ ಕಾರ್ಯದರ್ಶಿಗಳಾದ ಶ್ರೀ ಗಣೇಶ ರಾವ್ ಶುಭಹಾರೈಸಿದರು. ಬ್ರಹ್ಮಾವರದ ಎಸ್.ಎಂ.ಎಸ್. ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ। ವೈ ರವೀಂದ್ರನಾಥ್ ರಾವ್ ಇವರು ಸಂಘಟನೆಯ ಮಹತ್ವದ ಬಗ್ಗೆ ಉಪನ್ಯಾಸವಿತ್ತರು. ಶ್ರೀ ದೇವಾನಂದ ಭಟ್ ಬೆಳ್ವಾಯಿ ಇವರು ವಿಷಯ ಪ್ರಸ್ತಾವನೆ ಮಾಡಿದರು. ಬಾರ್ಕೂರಿನ ಶ್ರೀ ಮಾಸ್ತಿಯಮ್ಮ ದೇವಸ್ಥಾನದ ವಠಾರದಲ್ಲಿ ನಡೆದ ಈ ಕಾರ್ಯಕ್ರಮವನ್ನು ದೇವಸ್ಥಾನದ ಆಡಳಿತೆ ಮಂಡಳಿಯವರು ಪ್ರಾಯೋಜಿಸಿದ್ದರು. ಶ್ರೀ ರಾಮಚಂದ್ರ ರಾವ್ ಗೌರವಾಧ್ಯಕ್ಷರಾಗಿ ಶ್ರೀ ಮಂಜುನಾಥ ರಾವ್ ಅಧ್ಯಕ್ಷರಾಗಿ ಹಾಗೂ ಶ್ರೀಮತಿ ಸವಿತಾ ಎರ್ಮಾಳ್ ಇವರು ಕಾರ್ಯದರ್ಶಿಯಾಗಿ ಮೂರು ವರ್ಷಗಳ ಅವಧಿಗೆ ಆಯ್ಕೆಯಾದರು. ಸಮಾರಂಭದ ಅಧ್ಯಕ್ಷರಾಗಿ ಶ್ರೀ ಎಂ.ಕೆ.ಜಗನ್ನಿವಾಸ ರಾವ್ ಆಗಮಿಸಿದ್ದರು. ಅವರು ಸಂಘದ ಬೆಳವಣಿಗೆಗೆಗಾಗಿ ಹಲವಾರು ಸಲಹೆ ಸೂಚನೆಗಳನ್ನು ನೀಡಿದರು. ಆಗಮಿಸಿದ್ದ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು. ಸಭಿಕರಿಗೆ ಡಾ। ಸುದರ್ಶನ್ ರಾವ್ ಇವರು ರಚಿಸಿದ ಪುಸ್ತಕ ಅಸ್ಮಿತೆಯನ್ನು ವಿತರಿಸಲಾಯಿತು. ಶ್ರೀ ಭಾಸ್ಕರ ಹೆಬ್ಬಾರ್ ಧನ್ಯವಾದವಿತ್ತರು. ಶ್ರೀಮತಿ ಸವಿತಾ ಎರ್ಮಾಳ್ ಇವರು ಕಾರ್ಯಕ್ರಮ ನಿರ್ವಹಿಸಿದರು.

## ಪ್ರಚಲಿತ ವಿದ್ಯಮಾನ



ವಿವಿಧ ಮೂಲಗಳಿಂದ ಸಂಗ್ರಹ : ಮಲ್ಲಿಕ್ ಉಳಿಯಾರು
ಜಂಗಮವಾಣಿ : 9945885088

## ಕೊರೊನಾ ಪದಕೋಶ (Corona Dictionary)

1) ಕೋವಿಡ್ 2019 :
ಕೋರನಾ ವೈರಲ್ ಡೀಸೀಸ್-Covid
2) ತೀವ್ರಸಿರಾಟದ ತೊಂದರೆ :
ಸೀವಿಯರ್ ಅಕ್ಯುಟ್ ರೆಸ್ಪಿರೇಟರಿ ಇನ್ಫೆಕ್ಷನ್-SARI
3) ತೀವ್ರ ಶೀತ, ಕೆಮ್ಮಿನ ತೊಂದರೆ :
ಇನ್‌ಫ್ಲೂಯೆನ್ಸಾ ಲೈಕ್ ಇಲ್‌ನೆಸ್-ILI
4) ತೀವ್ರ ಪ್ರತಿಕಾಯ ಪರೀಕ್ಷೆ :
ರ್‍ಯಾಪಿಡ್ ಆ್ಯಂಟಿಜೆನ್ ಟೆಸ್ಟ್-RAT
5) ನೈಜ ಸಮಯ ಸಣ್ಣ ಸಣ್ಣ ಕಣಗಳ ಸರಣಿ ಪ್ರತಿಕ್ರಿಯೆ ಪರೀಕ್ಷೆ : ರಿವರ್ಸ್ ಟ್ರಾನ್ಸ್‌ಸ್ಕ್ರಿಪ್ಷನ್–ಪಾಲಿಮರ್ ಚೈನ್ ರಿಯಾಕ್ಷನ್ ಟೆಸ್ಟ್-RT-PCR
6) ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ :
ಸ್ಟ್ಯಾಂಡರ್ಡ್ ಆಪರೇಷನಲ್ ಪ್ರೊಸೀಜರ್-SOP
7) ವೈಯಕ್ತಿಕ ರಕ್ಷಣಾ ಉಪಕರಣಗಳು :
ಪರ್ಸನಲ್ ಪ್ರೊಟೆಕ್ಷನ್ ಎಕ್ಯೂಪ್‌ಮೆಂಟ್-PPE
8) ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ :
ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್-ICMR
9) ಉಸಿರಾಟ ಪರೀಕ್ಷಾ ಉಪಕರಣ : ಆಕ್ಸಿಮೀಟರ್
10) ನಿಶ್ವಾಸ ಕವಾಟು : ಎಕ್ಸಾಲೇಶನ್ ವಾಲ್ವ್
11) ಪ್ರಪಂಚದಾದ್ಯಂತ ಹಬ್ಬುತ್ತಿರುವ : ಪ್ಯಾಂಡೆಮಿಕ್
12) a) ಕೊರೊನಾ ವೈರಾಣು : ಕೊರೊನಾ ವೈರಸ್
b) ಗಂಟಲು ದ್ರವ ಮಾದರಿ : ಡ್ರಾಪ್‌ಲೆಟ್ ಸ್ಯಾಂಪಲ್
13) a) ಉಷ್ಣತಾ ಪರೀಕ್ಷೆ : ಥರ್ಮಲ್ ಸ್ಕ್ರೀನಿಂಗ್
b) ಗಂಟಲು ದ್ರವ ಪರೀಕ್ಷೆ : ಸ್ವ್ಯಾಬ್ ಟೆಸ್ಟ್

ಕೊರೊನಾ ಮುಂಜಾಗ್ರತೆ ಕ್ರಮಗಳು :

14) ಮುಖ ಗವಸು :ಮಾಸ್ಕ್
15) ಕೈ ಗವಸು : ಗ್ಲೌಸ್
16) ಮುಖ ರಕ್ಷಣಾ ಕವಚ : ಫೇಸ್ ಶೀಲ್ಡ್
17) ಕೈ ಸ್ವಚ್ಛಗೊಳಿಸುವ ದ್ರಾವಣ : ಸ್ಯಾನಿಟೈಸರ್
18) ಸಾಮಾಜಿಕ ಅಂತರ : ಸೋಶಿಯಲ್ ಡಿಸ್ಟೆನ್ಸ್
19) ಗೃಹವಾಸ : ಸ್ಟೇ ಎಟ್ ಹೋಮ್
20) ದಿಗ್ಬಂಧನ : ಲಾಕ್‌ಡೌನ್
21) ಜನ ಪ್ರವೇಶಿಸದಂತೆ ಮತ್ತು ಹೊರ ಬರದಂತೆ ತಡೆಯಲಾಗುವ ಭದ್ರತಾ ವ್ಯವಸ್ಥೆ : ಸೀಲ್‌ಡೌನ್
22) ಖಾಯಿಲೆ ಪೀಡಿತ ವ್ಯಕ್ತಿಯನ್ನು ನಿರ್ದಿಷ್ಟ ಅವಧಿಯವರೆಗೆ ಕಾವಲು ಇಡುವ ವ್ಯವಸ್ಥೆ : ಕ್ವಾರಂಟೈನ್
23) a) ಇತರರಿಂದ ಪ್ರತ್ಯೇಕವಾಗಿ ವಾಸ ಮಾಡುವ ವ್ಯವಸ್ಥೆ : ಐಸೋಲೇಶನ್
b) ಕೋವಿಡ್‌ಗೆ ಸಂಬಂಧಿತ ಆತಂಕಕಾರಿ ವಿಷಯಗಳನ್ನು ಸಾಮಾಜಿಕ ಜಾಲತಾಣದಲ್ಲಿ ವೀಕ್ಷಿಸಿ ಒತ್ತಡಕ್ಕೊಳಗಾಗುವುದು : ಡೂಮ್ ಸ್ಕ್ರೋಲಿಂಗ್
24) ದಿಗ್ಬಂಧನ ಮುಕ್ತ : ಅನ್‌ಲಾಕ್
25) a) ಗೃಹವಾಸ : ಹೋಮ್ ಕ್ವಾರಂಟೈನ್
b) ಆಸ್ಪತ್ರೆ ವಾಸ : ಹಾಸ್ಪಿಟಲ್ ಕ್ವಾರಂಟೈನ್
c) ಸಂಸ್ಥೆ ವಾಸ : ಇನ್‌ಸ್ಟಿಟ್ಯೂಶ್‌ನಲ್ ಕ್ವಾರಂಟೈನ್
26) ಪ್ರಯಾಣ ವಿವರ : ಟ್ರಾವೆಲ್ ಹಿಸ್ಟರಿ
27) ಪ್ರಾಥಮಿಕ ಸಂಪರ್ಕ : ಪ್ರೈಮರಿ ಕಾಂಟ್ಯಾಕ್ಟ್
28) ದ್ವಿತೀಯ ಸಂಪರ್ಕ : ಸೆಕೆಂಡರಿ ಕಾಂಟ್ಯಾಕ್ಟ್
29) ಕೊರೊನಾ ಯೋಧರು : ಕೊರೋನಾ ವಾರಿಯರ್ಸ್
ಉದಾ : ಆರೋಗ್ಯ ಇಲಾಖೆ ವೈದ್ಯರು, ದಾದಿಯರು, ತಂತ್ರಜ್ಞರು, ಪೊಲೀಸ್ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಶಿಕ್ಷಣ ಇಲಾಖೆ ವಿವಿಧ ಸ್ತರಗಳ ಶಿಕ್ಷಕರು ಇತ್ಯಾದಿ
30) ಕೊರೊನಾ ಮಾರ್ಗಸೂಚಿ : ಕೊರೊನಾ ಗೈಡ್‌ಲೈನ್ಸ್
31) ದೇಹದಲ್ಲಿ ಆಮ್ಲಜನಕ ಕಡಿಮೆಯಾದರೆ ಕೊನೆತನಕ ಗೊತ್ತಾಗದಿರುವ ಲಕ್ಷಣ : ಹ್ಯಾಪಿ ಹೈಪೋಕ್ಸಿಯ
32) ಲಕ್ಷಣಗಳಿಲ್ಲದಿರುವ ಕೊರೊನಾ :
ಎ–ಸಿಂಪ್ಟೋಮೆಟಿಕ್
33) ಹೆಚ್ಚು ಸೂಕ್ಷ್ಮ ಪ್ರಕರಣಗಳಿರುವ ಪ್ರದೇಶ : ಹಾಟ್‌ಸ್ಪಾಟ್
34) ನಿಯಂತ್ರಿತ ವಲಯ : ಕಂಟೈನ್‌ಮೆಂಟ್ ಝೋನ್
35) ತೀವ್ರ ಅಪಾಯಕಾರಿ ವಲಯ : ರೆಡ್ ಝೋನ್












Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org